ಅಪರಂಜಿ

ಫೆಬ್ರವರಿ 98

ತಿಳಿನಗೆಯ ಕಾರಂಜಿ



ಪ್ರಕಾಶ್

ಸಿ. ಆರ್. ಸತ್ಯ

ಕಂಭಂ ಕೃಷ್ಣಮೂರ್ತಿ

ಭೂಮಿ

ಎಸ್. ಎನ್. ಶಿವಸ್ವಾಮಿ

ಲೀಲಾ ಶೇಖರ್

ಎಂ. ಎನ್. ಕೆ.

ಚಂಚಲಾ ಶ್ರೀಕಂಠಯ್ಯ

ಆನಂದ

ಬಿ. ಜಿ. ಕುಸುಮ

ಕು. ಗೋ.

ಬಿಡಿ ಪ್ರತಿ: 3 ರೂ. 50 ಪೈ



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 15 ಫೆಬ್ರವರಿ '98 ಸಂಚಿಕೆ-5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 15 ಫೆಬ್ರವರಿ 98 ಸಂಚಿಕೆ-5

ಅಶಬ್ದಮಸ್ಪರ್ಶ ಮರೂಪ ಮವ್ಯಯಂ ತಥಾರಸಂ ನಿತ್ಯಮಗಂಧವಚ್ಚಯತ್.....

- ಕಠ

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳೂ, ನಾಶವೂ ಇಲ್ಲದ ಆತ್ಮನನ್ನರಿತವನು ಬಿಡುಗಡೆ ಹೊಂದುತ್ತಾನೆ. (ಏತರಿಂದ ಎಂದರೆ ಮೃತ್ಯುಮುಖದಿಂದ)

ಉಪನಿಷತ್ತು ಹೀಗೆ ಹೇಳಿತಲ್ಲಾ ನಮಗೇನು ಬಂತು ಇದರಿಂದ ಎಂದರೆ ಬಹುಶಃ ಚುನಾವಣೆಗಳಲ್ಲಿ ಆಡಿದ ಮಾತುಗಳು ಶಬ್ದ ಎಂಬ ವಿಷಯವಷ್ಟೇ. ನಿಜಕ್ಕೂ ಅದಕ್ಕೂ ಸಂಬಂಧವಿಲ್ಲ. ಹಿಂದಿನಂತೆ ಮುಂದೂ ನಿನಗೆ ಜೀವನದಲ್ಲಿ ಶಾಂತಿಯ ಸ್ಪರ್ಶ ಇಲ್ಲ. ಮುಂದಿನ ದಿನಗಳ ಜೀವನದ ರೂಪವು ನಿನಗಾಗಲಿ ನಿನಗೆ ಹೇಳುವ ಜನಗಳಿಗಾಗಲೀ ಏನೂ ಗೊತ್ತಿಲ್ಲ. ಬುರುಡೆ ಬಿಡುತ್ತಾರೆ ಏಕೆಂದರೆ ನಂಬಲು ನೀನಿದ್ದೀಯಲ್ಲಾ ಅದಕ್ಕೆ. ಹೈಬ್ರಿಡ್ ಪದಾರ್ಥಗಳಲ್ಲಿ ಏತರ ರಸ? ಸುಖವನ್ನಾಗಲೀ ಸತ್ಯ ಎಂಬುದನ್ನಾಗಲೀ ಪರಂಪರೆಯಿಂದ ಕಾರಣದ ಜನಗಳಿಂದ ಕಡ ತಂದ ಮಾತುಗಳಲ್ಲಿ ಎಂಥ ರಸ. ನೆಮ್ಮದಿಯ ಗಂಧ ಅವರಿಗೂ ಇಲ್ಲ ನಿನಗೂ ಇಲ್ಲ. ಹಿಂದೆ ಎಷ್ಟೋ ಸಾರಿ ನಾಶವಾದ ಇವನ್ನೆಲ್ಲಾ ನಂಬಿದ ನಿನಗೆ ಏನು ಸಿಕ್ಕಿತು? ಅವರಿಗೆಲ್ಲಾ ಕೋಟ್ಯಾಂತರ ಸಿಕ್ಕಿತು. ಹಾರಿಹೋದ ಪ್ರಾಣಗಳು ಹಾರಿಹೋದವು.

ಅವರ ಮಾತನ್ನು ನಂಬಿ ಉರುಲು ಹಾಕಿಕೊಳ್ಳಬಾರದು ಎಂಬುದನ್ನರಿತವನು ಭ್ರಮೆಯಿಂದ ಬಿಡುಗಡೆ ಹೊಂದುತ್ತಾನೆ.



ಪ್ರಕಾಶ್

ಇಂದೋರ್‌ನಲ್ಲಿ ಮೂರೇ ಓವರ್‌ನಂತರ ಪಂದ್ಯ ನಿಲ್ಲಿಸಲಾಯಿತು
- ಕ್ರೀಡಾ ಸುದ್ದಿ

'ನಿಗದಿತ' ಓವರ್ ಪಂದ್ಯ ಅದರೆ ಇದೇ!!

☆☆☆

ಚುನಾವಣೆ ನಂತರ ಅನಿಶ್ಚಿತ ಸ್ಥಿತಿ ಇರದು
- ಅಜಿತ್ ಸಿಂಗ್

ಆಶಾವಾದಿ ಎಂದರೆ ಇವರೊಬ್ಬರೇ!!

☆☆☆

ಪೋಲಿಸ್ ಪೇದೆಯಿಂದ ಸಹೋದ್ಯೋಗಿಯ ವಂಚನೆ
- ಸುದ್ದಿ

ಬೇಲಿಯೇ ಎದ್ದು......!!

☆☆☆

ಬಸು ಪ್ರಧಾನಿಯಾದರೆ ನನ್ನ ಅಭ್ಯಂತರ ಇಲ್ಲ
- ಗುಜ್ರಾಲ್

ಬಿಸಿ ತುಪ್ಪ??

☆☆☆

'ಚುನಾವಣಾ ಮೈತ್ರಿ'
- ಪತ್ರಿಕೆಯಲ್ಲಿ ಶೀರ್ಷಿಕೆ

'ಮೈತ್ರಿ' ಎಂಬ ಪದಕ್ಕೆ ನೂತನ ಅರ್ಥ!?

☆☆☆

ಮತ್ತೆ ಸಮ್ಮಿಶ್ರ ಸರ್ಕಾರ ರಚನೆ
- ಗುಜ್ರಾಲ್ ಭವಿಷ್ಯ

"Some' ಮಿತ್ರ!!

★★★

ರಾಜಕೀಯಕ್ಕೆ ಸೋನಿಯಾ ಪ್ರವೇಶ

- ಸುದ್ದಿ

'ಜಾತ್ಯಾತೀತ' ಎಂದರೆ ಇದೇ!!

★★★

ರೂಪಾಯಿ ಕುಸಿತದಿಂದ ಲಾಭವೇ ಹೆಚ್ಚು

- ಮನಮೋಹನ್‌ಸಿಂಗ್

ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ!!

★★★

ಕ್ಲಿಂಟನ್ ಭಾರತಕ್ಕೆ ಬರುವುದು ನವೆಂಬರ್‌ನಲ್ಲಿ

- ಸುದ್ದಿ

ನಮ್ಮ ಚುನಾವಣೆಗಳನ್ನು ನೋಡುವ
ಸದವಕಾಶ ಕಳೆದುಕೊಂಡರು, ಪಾಪ!!

★★★

ಭಾರತ ಕ್ರಿಕೆಟ್ ತಂಡಕ್ಕೆ ಹೊಸ ನಾಯಕ?

- ಪತ್ರಿಕೆ

ರಾಜಕೀಯದಂತೆಯೇ ಕ್ರಿಕೆಟ್‌ನಲ್ಲೂ!!

ನಾನು ನೋಡಿರೋ
ಹಲವು ಕಾಲೇಜ್ ತರುಣೀರು
ಪ್ರಾಯದಲ್ಲಿ ಹೀಗೆ ಕಾಣಿಸ್ತಾ ಇದ್ರು
ಬಹಳಷ್ಟು ಮಂದಿ ಇದ್ದದ್ದು
ಈ ರೀತಿ
ಆ
ದ
ರೆ
ವಯಸ್ಸು ಆಗ್ತಾ ಬಂದ ಹಾಗೆ ಮುಕ್ಕಾಲು
ಪಾಲು ತರುಣೀರೆಲ್ಲಾ ಕೊನೇಗೆ ಈ ರೀತಿ ಬದಲಾಗೋ
ದ್ರಲ್ಲಿ ಆಶ್ಚರ್ಯ ಏನೂ ಇಲ್ಲ ಅಲ್ವೇ

S.P.C.A.

ವಾರ್ಷಿಕ ವರದಿ

- ಸೀ.ಆರ್. ಸತ್ಯ

ಭಗಿನಿಯರೇ,

ನಮ್ಮ SPCA ಈಗ ಒಂದು ವರ್ಷದ ಎಳೆ ಕೂಸಾಗಿದೆ. ಒಂದು ವರ್ಷ ಅನ್ನೋದು ಕಾಲಚಕ್ರದ ಒಂದು ತುಣುಕು ಅಷ್ಟೆ. ಅಷ್ಟರಲ್ಲಿ ನಾವು ಅಂದುಕೊಂಡಿದ್ದೆಲ್ಲಾ ಸಾಧಿಸೋದು ಕಷ್ಟ. ಆದರೆ ಆ ದಿಕ್ಕಿನಲ್ಲಿ ನಾವು ನಡೆದಿದ್ದೇವೆ ಎಂದು ಮಾತ್ರ ನಾವು ಹೆಮ್ಮೆಪಟ್ಟುಕೊಳ್ಳಬಹುದು. ಈ ವಾರ್ಷಿಕ ವರದಿಯಲ್ಲಿ ಇದರ ಬಗ್ಗೆ ಕೆಲವು ಮಾಹಿತಿಗಳನ್ನು ನಿಮ್ಮ ಮುಂದಿಡಲು ಸಂತೋಷ ಪಡುತ್ತೇನೆ.

ಮೊಟ್ಟಮೊದಲಿನ ಕಾರ್ಯ ಸಲೀಸಾಗಿ ನಡೆದಿದ್ದು ಅಂದರೆ ನಾಮಫಲಕದ್ದು. ನಮ್ಮ ಪ್ರೆಸಿಡೆಂಟರ ಕೃಪೆಯಿಂದಾಗಿ ಅವರ ಬಾಲ್ಕನಿ ಮೇಲೆ ದೊಡ್ಡದಾಗಿ ಒಂದು ಬೋರ್ಡ್‌ನ್ನ ಬರೆಸಿ ಸಾಂಪ್ರದಾಯಿಕವಾಗಿ ಹತ್ತು ತಿಂಗಳ ಹಿಂದೆ ಅನಾವರಣ ಮಾಡಿದ್ದು ನಿಮಗೆಲ್ಲಾ ತಿಳಿದೇ ಇದೆ. ""Society for Preventing being Called Aunties" ಅಂತ ಮುದ್ದಾಗಿ ಬೋರ್ಡ್ ಬರೆದ ಸೆಲ್ವರಾಜ್ ಅವರಿಗೂ ತಮ್ಮ ಬಾಲ್ಕನಿಯಲ್ಲಿ ಅದಕ್ಕೆ ಜಾಗ ಕೊಟ್ಟ ಪ್ರೆಸಿಡೆಂಟ್ ಯೌವ್ವನಶ್ರೀ ಅವರಿಗೂ ನಮ್ಮ ವಂದನೆಗಳು.

ನಂತರ ನಾವು ಹೆಚ್ಚಿಗೆ ಶ್ರಮಪಟ್ಟು ನಡೆಸಿದ ಕಾರ್ಯಕ್ರಮ, ನಮ್ಮ ಸದಸ್ಯತ್ವವನ್ನು ಏರಿಸುವುದು. ನಮ್ಮ ಧ್ಯೇಯವನ್ನು ಮೆಚ್ಚಿಕೊಂಡು ಅನೇಕನೇಕ ಸದಸ್ಯಿಣಿಯರು ಮುಂದೆ ಬಂದು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡರು. (ಹಣವನ್ನು ಆಮೇಲೆ ಪಾವತಿ ಮಾಡುತ್ತೇವೆಂಬುದು ಮುಖ್ಯವಲ್ಲ) ಇದಕ್ಕೆ ಕಾರಣ ಇಷ್ಟೆ. ಭಗಿನಿಯರೇ, ನಾವೆಲ್ಲಾ ಮನದಲ್ಲಿ ನೊಂದಿದ್ದೇವೆ. ದೇಹದಲ್ಲಿ ಸೋತಿದ್ದೇವೆ. ಮೂವತ್ತು ವರ್ಷದ ವಯಸ್ಸು ದಾಟಿದ್ದೀವಿ ಎಂಬ 'ತಪ್ಪಿಗೆ' ನಮ್ಮನ್ನು ಇತರೇ ಜನಗಳು, ಅದರಲ್ಲೂ ನಮಗಿಂತ ಕಮ್ಮಿ ವಯಸ್ಸಿನ ಯುವತಿಯರು, ನಮ್ಮನ್ನು ''ಆಂಟಿ'' ''ಆಂಟಿ'' ಅಂತ ಬಹಿರಂಗವಾಗಿ ಕರೆದು ನಮ್ಮನ್ನು ದಿನ ನಿತ್ಯ ಜೀವನದಲ್ಲಿ ಅವಮಾನ ಪಡಿಸ್ತಿದ್ದಾರೆ. ಹಾಗಂತ ಯುವಕರೇನೂ ಹಿಂದೆ ಬಿದ್ದಿಲ್ಲ. ಯಾವ ಅಂಗಡಿಗೆ ಹೋಗಿ, ಯಾವ ಸೇಲ್ಸ್‌ಮನ್‌ನ ಮಾತನಾಡಿಸಿ, ನಿಮ್ಮನ್ನು 'ಆಂಟಿ' ಅಂತ ಕೂಗ್ತಾನೆ. ಈ ಪದ ಹಾಲಿನವನಿಗೂ, ಪೇಪರ್‌ನವನಿಗೂ ಗೊತ್ತಾಗಿ ಹೋಗಿದೆ. ತರಕಾರಿಯವನೂ 'ಆಂಟಿ' ಅಂತಾನೆ; ಹೂವಿನ ಹುಡುಗಿಯೂ 'ಆಂಟಿ' ಅಂತಾಳೆ.

ಹೀಗಾಗಿ ನಮ್ಮಂತಹವರನ್ನ 'ಆಂಟಿ' ಅಂತ ಕರೆದರೆ, ಆಗುವ ಸಂಕಟವನ್ನು ಹಂಚಿಕೊಳ್ಳಲು ಸಹ-ಸದಸ್ಯಿಣಿಯರು ಇಲ್ಲದಿದ್ದರೆ ಹೇಗೆ? ಹೃದಯದಲ್ಲಾಗುವ

ವಳಮಳ ಹೊಟ್ಟೆಯಲ್ಲಿ ಆಗುವ ಕಿವಿಚಾಟ, ತಲೆಕೂದಲಿನ ಸರೆಯಾಟ; ಇವೆಲ್ಲಾ ಇನ್ಯಾರಿಗೆ ಅರ್ಥವಾಗುತ್ತೆ? ನಮ್ಮ ಗಂಡಂದಿರನ್ನಂತೂ ಬಿಡಿ. ಗ್ಯಾಸ್‌ಕೇಸ್, ಸಂಬಂಧೀಕರ ಮದುವೆಗೆ ಮಾತ್ರ ನಮ್ಮನ್ನ 'ಹೆಂಡತಿ' ಅಂತ ಕರೆದುಕೊಂಡು ಹೋಗ್ತಾರೆ (ಸೋಶಿಯಲ್ ಪ್ರೆಶರ್‌ನಿಂದಾಗಿ) ಅಷ್ಟೆ. ಇಲ್ಲದಿದ್ದರೆ ಅವರ ಪ್ಲಿಷರೆಬಲ್ ಕಂಪನಿ ಏನು ಅಂತ ನಾನೇನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ.

ನಂತರ, ಕಳೆದ ಫೆಬ್ರುವರಿಯಲ್ಲಿ ನಡೆದ ವಿಚಾರ ಗೋಷ್ಠಿಯಲ್ಲಿ, ನಮ್ಮ ಸದಸ್ಯಿಣಿಯಾದ ಶ್ರೀಮತಿ ಗುಲಾಬಿಯವರು ಈ ವಿಷಯವನ್ನು ಹೃದಯಾಳದಿಂದ ವಿಶ್ಲೇಷಿಸಿದರು. ಅವರೇ ಹೇಳಿದಂತೆ ''.... ಆಂಟಿ ಅಂತ ನನ್ನನ್ನು ಯಾರಾದರೂ ಸಂಬೋಧಿಸಿದರೆ ನನಗೆ ತಕ್ಷಣ ಇಪ್ಪತ್ತು ವರ್ಷ ಜಾಸ್ತಿ ವಯಸ್ಸಾಗಿದೆ ಅಂತ ಅನ್ನಿಸುತ್ತೆ ನೋಡಿ. ದಾಳಿಂಬೆ ಬೀಜಗಳು ಅಂತ ಅಂದ್ಕೊಂಡಿರೋ ನನ್ನ ಹಲ್ಲುಗಳು ಒಟ್ಟಿಗೆ ಬಿದ್ದುಹೋದವೇನೋ ಅನ್ನಿಸುತ್ತೆ. ತಲೆಗೆ ಹಾಕ್ಕೊಂಡಿರೋ ಡೈ ಹಾಗೇ ಕರಗಿ ರಸ್ತೇಲಿ ಹರಿದು ಹೋದಾಗೆ ಆಗುತ್ತೆ. ಎರಡೇ ಮಕ್ಕಳು ಇದ್ದರೂ ತಕ್ಷಣ ಅಜ್ಜಿ ಆದನೇನೋ ಅನ್ನಿಸುತ್ತೆ....'' ಈ ಭಾವನೆಯನ್ನ ಪೂರ್ಣವಾಗಿ ಅನುಮೋದಿಸುತ್ತಾ ನಮ್ಮ ವೈಸ್ ಪ್ರೆಸಿಡೆಂಟ್ ಶ್ರೀಮತಿ ಆಶಾಕಿರಣರವರು, ''ಗುಲಾಬಿಯವರು ಹೇಳೋದು ಅಕ್ಷರಶಃ ನಿಜ. ನೆನ್ನೆ ದಿವಸ ನಮ್ಮನೆಗೆ ಒಂದು ಜಸ್ಟ್‌ಮ್ಯಾರೀಡ್ ಕಪಲ್ ಬಂತು. ಆ ಹುಡುಗಿ ನನ್ನನ್ನು ಅಂಟೀ ಅಂತ ಕರೆದಾಗ ದೇವರ ದಯ, ಆಗ್ತಾನೇ ಬ್ಯೂಟಿ ಪಾರ್ಲರ್‌ನಿಂದ ಬಂದಿದ್ದೆ - ನನ್ನ ಮೇಕಪ್ ಒಳಗಿನ ರಿಂಕಲ್ಸ್ ಎಲ್ಲಾ ಟ್ವಿಂಕಲ್ ಟ್ವಿಂಕಲ್ ಅಂತ ಹೊರಗೆ ಬಂದ್ಹಾಗೆ ಆಯ್ತು. ಇದು ತೀರ ಅನ್ಯಾಯ. ಆ ಹುಡುಗೀಗೂ ಒಂದಲ್ಲಾ ಒಂದು ದಿನ ವಯಸ್ಸಾಗುತ್ತೆ ಬಿಡಿ'' ಅಂತ ವ್ಯಸನಪಟ್ಟರು. ಭಗಿನಿಯರೇ, ಇದು ಹೊಟ್ಟೆಕಿಚ್ಚಿನ ಮಾತಲ್ಲ. ಇದು ಒಂದು ಒಳ ನೋವಿನ ಪ್ರತಿಕ್ರಿಯೆ ಅಷ್ಟೆ.

ಈ ನೋವಿಗೆ ಉಪ್ಪುಕಾರ ಸೇರಿಸುವ ಇನ್ನೊಂದು ಜನಾಂಗ - ನಮ್ಮ ಗಂಡಂದಿರು, ಹಾಗೂ in general ಗಂಡಸರು. ಅದಕ್ಕಾಗೇ ನಮ್ಮ ಮೇ ತಿಂಗಳ ಗೆಟ್ ಟುಗೆದರ್‌ನಲ್ಲಿ ಹತ್ತು ಜನ ಸ್ಯಾಂಪಲ್ ಗಂಡಸರನ್ನ ನಾವು ವೇದಿಕೆಯ ಮೇಲೆ ಎಳೆದು ಕೂರಿಸಿ, ನಮ್ಮನ್ನು ''ಆಂಟಿ'' ಅಂತ ಕೂಗಿದರೆ ನಿಮಗೆ - ಅಂದರೆ ಗಂಡಂದಿರಿಗೆ ಅವಮಾನ ಆಗೋದಿಲ್ಲವೆ? ಅಂತ ನಮ್ಮ ಯೌವ್ವನಶ್ರೀಯವರು ನೇರವಾಗಿ ಪ್ರಶ್ನೆ ಕೇಳಿದರು. ಅದಕ್ಕೆ ಅವರೆಲ್ಲಾ ಕೊಟ್ಟ ಉತ್ತರ, ಆನ್ ಎನ್ ಆವರೇಜ್ ಹೀಗಿತ್ತು:

- ನನ್ನ ಹೆಂಡತೀನ ಯಾರಾದರೂ 'ಆಂಟಿ' ಅಂತ ಅಂದರೆ ಅದು ಅವಳಿಗೆ ಸಮಾಜ ತೋರಿಸೋ ಗೌರವ ಅಂತ ತಿಳ್ಕೋತೀನಿ.

- ಸಧ್ಯ ಕೊನೆಗೂ 'ಆಂಟಿ' ಆದಳಲ್ಲ. ಚಿಕ್ಕ ವಯಸ್ಸಿನವರ ಹತ್ತಿರ ಸಧ್ಯ ಇನ್ನು ಮಾತನಾಡಬಹುದಲ್ಲ!

- ಚಿಕ್ಕ ಮಕ್ಕಳನ್ನ, ಮೊಮ್ಮಕ್ಕಳನ್ನ ಕಂಟ್ರೋಲ್ ಮಾಡೋಕ್ಕೆ ಒಳ್ಳೇದಾಯ್ತು ಬಿಡಿ; ''ಅಲ್ನೋಡು, ಆಂಟಿ ಬಂದ್ರು!'' ಅಂತ ಅಂದರೆ ಎಂತಹ ಕಪಿಗಳೂ ತಣ್ಣಗಾಗುತ್ವೆ.

- ನನ್ನ ಹೆಂಡ್ತೀನ ಸೆಲ್ವಾರ್ ಕಮೀಜ್‌ನಲ್ಲಿ ನೋಡಿ ನೋಡಿ ಬೇಜಾರಾಗಿತ್ತು. ಸಧ್ಯ ಈಗ ಗಂಭೀರವಾಗಿ ಸೀರೆ ಉಟ್ಕೋತಾಳೆ ಬಿಡಿ!

- ಬಿಟ್‌ವೀನ್ ಯೂ ಎಂಡ್ ಮೀ, ಹೇಳೋದಾದ್ರೆ, ಲೋಕಲ್ ಕ್ಲಬ್‌ನಲ್ಲಿ, ಬ್ಯೂಟಿ ಕಾಂಪಿಟೇಷನ್‌ನಲ್ಲಿ, ಹೇರ್‌ಡೂಸ್‌ನಲ್ಲಿ ಇನ್ನು ಮೇಲೆ ನನ್ನ ಹೆಂಡ್ತಿ ಗಲಾಟೆ ಕಮ್ಮಿ ಆಗುತ್ತೆ. ಬಟ್, ನನ್ನ ಡ್ರೈವರ್ ಡ್ಯೂಟಿ ಏನೂ ಕಮ್ಮಿ ಆಗಲ್ಲ ಬಿಡಿ. ಯಾಕೇಂದ್ರೆ ಅವಳು ಇನ್ನು ಮೇಲೆ ಜಡ್ಜ್ ಆಗೋದರೆ ಇನ್ನೂ ತೊಂದರೆ ಜಾಸ್ತಿ.

- 'ಆಂಟಿ' ಅಂತ ಕರೆದರೆ ಇವರ ಗಂಟು ಏನ್ಹೋಯ್ತು ಅಂತೀನಿ? ನಾವೆಲ್ಲಾ ಅಂಕಲ್ ಅಂತ ಕರೆಸಿಕೊಂಡು ಖುಶಿ ಪಡಲ್ವಾ?

- 'ಆಂಟಿ' ಅಂತ ಕೂಗಿದ ತಕ್ಷಣ ನನ್ನ ಹೆಂಡತೀಗೆ ವಯಸ್ಸಾಯ್ತು ಅಂತ ಅಂದ್ಕೊಂಡ್ರಾ? ಅವಳನ್ನ ಮದುವೆ ಆದಾಗ್ಲೇ ವಯಸ್ಸಾಗಿತ್ತು ಬಿಡಿ (ನಿಟ್ಟುಸಿರು)

(ಈ ಮೇಲ್ಕಂಡ ಉತ್ತರಗಳಿಂದ ಗಂಡಸರ ಬಗ್ಗೆ ನೀವೇ ತೀರ್ಮಾನಕ್ಕೆ ಬನ್ನಿ. ಇಂತಹವರ ಸಹವಾಸ ಕಟ್ಟಿಕೊಂಡರೆ ನಾವೆಲ್ಲಾ ಐವತ್ತು ವರ್ಷ ದಾಟೋ ಸಮಯಕ್ಕೆ ಇನ್ನೊಂದು SPCG ಕಟ್ಟಬೇಕಾಗುತ್ತೆ.... for Preventing being Called Grandmas! ಆವಾಗ್ಲೂ ಅವರುಗಳು ಅಂಕಲ್ ಅಂತ ಕರೆಸ್ಕೊಂಡು ಲಂಗುಲಗಾಮಿಲ್ಲದೆ ಓಡಾಡ್ತಾ ಇರ್‍ತಾರೆ. ಬೆಂಗಳೂರಿನ ಎಂ.ಜಿ. ರೋಡಿನಲ್ಲಿ, ಜಯನಗರದಲ್ಲಿ ಕೆಲವು ಕುದುರೆಗಳು ಲೂಸ್ ಆಗಿ ಇವೆಯಲ್ಲಾ ಆ ತರಹಾ!)

ಒಟ್ಟಿನಲ್ಲಿ ಈ ವರ್ಷದ ಕಾರ್ಯಕ್ರಮಗಳಿಂದ ನಾವೇನು ದೊಡ್ಡದಾಗಿ ಸಾಧಿಸದಿದ್ದರೂ ನಮ್ಮ ಸದಸ್ಯಿಣಿಯರಲ್ಲಿ ಒಂದು ರೀತಿಯ ಒಗ್ಗಟ್ಟು ಮೂಡಿ ಬಂದಿದೆ; ನಮ್ಮ ಅಂತಿಮ ಧ್ಯೇಯದ ಬಗ್ಗೆ ಕಳಕಳಿ ಉಂಟಾಗಿದೆ, ನೀಚ ಗಂಡಸರು ಹಾಗೂ ಬುದ್ಧಿ ತಿಳಿಯದ ಯುವಕ ಯುವತಿಯರು ನಮ್ಮನ್ನು 'ಆಂಟಿ' ಮಾಡಿದರೂ ಅದನ್ನು ಸಹಿಸಿಕೊಳ್ಳೋದಕ್ಕೆ ಅದನ್ನು ನಿಲ್ಲಿಸೋಕ್ಕೆ ನಮಗೆ ಧೈರ್ಯ ಇದೆ; ಉಪಾಯವಿದೆ ಅಂತನಾದರೂ ನಮಗೆ ಮನದಟ್ಟಾಗಿದೆ.

ಮೊದಲೇ ಹೇಳಿದ ಹಾಗೆ, ಒಂದು ವರ್ಷದಲ್ಲಿ ಏನು ತಾನೇ ಮಾಡಬಲ್ಲೆವು? ಈ ಸಮರವನ್ನು ಮುಂದುವರೆಸೋಣ. ನಿಮ್ಮೆಲ್ಲರ ಸಹಕಾರವೂ ಭದ್ರವಾಗಿರಲಿ. ಎದೆ ಗುಂದದಿರಿ, ನೀವೆಲ್ಲರೂ One way street ನಲ್ಲಿ ಇದ್ದೀರಾ. No going back! Entry towards GRANDMA Status Only!!

ಜೈ SPCA

ನಿತ್ಯಮಲ್ಲಿಗೆ (Ms)
ಕಾರ್ಯದರ್ಶಿನಿ

ಸಂಪೂರ್ಣ ಸಹಕಾರ

– ಕಂ.ಛಂ. ಕೃಷ್ಣಮೂರ್ತಿ

ನಾನು ನನ್ನ ಹೆಂಡತಿಯ ಕೊರಳಿಗೆ ಮಾತ್ರ ತಾಳಿ ಕಟ್ಟಿ ಮದುವೆಯಾದಾಗ ಅವಳ ತಮ್ಮ ಶ್ರೀಕಂಠುವನ್ನೂ ಮನೆತುಂಬಿಸಿಕೊಳ್ಳಬೇಕಾಯಿತು. ''ಅವನಿಗೆ ತಾನೇ ಯಾರಿದ್ದಾರೇಂದ್ರೆ. ನಾವು ತಿನ್ನೋದ್ರಲ್ಲೇ ಒಂದು ತುತ್ತು ಹಾಕಿದ್ರಾಯ್ತು. ನಮ್ಮ ಜತೇಲಿ ಓಡಾಡಿಕೊಂಡಿರ್ತಾನೆ'' ಅಂತ ಮದುವೆಯಾದ ಹೊಸದರಲ್ಲಿ ನನ್ನ ಮೂಗಿಗೆ ತುಪ್ಪ ಸವರಿ, ನನ್ನ ಪತ್ನಿ ಅವನನ್ನೂ ನಮ್ಮ ಬಾಳ ನೌಕೆಗೆ ಹತ್ತಿಸಿಕೊಂಡಿದ್ದಳು. ಮೂಗಿಗೆ ಕವಡೆ ಕಟ್ಟಿಕೊಂಡು ಮುಂಜಾನೆಯಿಂದ ಸಂಜೆಯವರೆಗೂ ಕಛೇರಿಯಲ್ಲಿ ದುಡಿದು ಬರುತ್ತಿದ್ದ ನನಗೆ ಯಾವ ಕೆಲಸವೂ ಇಲ್ಲದೆ ಗೂಳಿಯಂತೆ ಅಡ್ಡಾಡುತ್ತಿದ್ದ ಅವನನ್ನು ನೋಡಿ ಮೈಯೆಲ್ಲಾ ಉರಿದು ಹೋಗುತ್ತಿತ್ತು ''ಏನಯ್ಯಾ ಶ್ರೀಕಂಠ, ಹ್ಯಾಗಿದ್ರೂ ಮುಂದಿನ ವಿದ್ಯಾಭ್ಯಾಸ ನಿನಗೆ ತಲೆಗೆ ಹತ್ತೂ ಹಾಗಿಲ್ಲ. ಯಾವುದಾದರೂ ಚಾಕರಿಗಾದ್ರೂ ಸೇರ್ಕೊಬಾರ್ದೆ'' ಎಂದೆ ಅವನು ಆಂಬೊಡೆ ತಿನ್ನುತ್ತಾ ಸಂತೃಪ್ತನಾಗಿದ್ದ ಸಂದರ್ಭ ನೋಡಿಕೊಂಡು ಹೇಳಿದೆ.

''ನೀನೇ ಒಂದು ಕೆಲಸ ಕೊಡಿಸು ಭಾವಯ್ಯ'' ಅವನು ನಿಸೂರಾಗಿ ಹೇಳಿದಾಗ ನಾನು ಮುಗುಮ್ಮಾದೆ.

ಒಂದು ದಿನ ನಾನು ಕಛೇರಿಯಿಂದ ಆಗತಾನೆ ಬಂದು ಕೋಟುಪೇಟಗಳನ್ನು ತೆಗೆದಿಡುತ್ತಿದ್ದಾಗ ಶ್ರೀಕಂಠು ದುಡು ದುಡು ಓಡಿಯೇ ಬಂದ ''ಅಕ್ಕಾ ಒಂದು ನೂರು ರೂಪಾಯಿ ಕೊಡು, ಭಾವನಿಗೆ ಪೇಡ ಕೊಡ್ಬೇಕು'' ಅಂತಂದ. ''ಯಾಕೋ ಪೇಡ. ಅದು ತಿಂದ್ರೆ ಅವರ ಮೈಗಾಗೊಲ್ಲ'' ಅಂತಂದಳು ನನ್ನ ಹೆಂಡತಿ. ''ಪರ್ವಾಗಿಲ್ಲ ಕೊಡಕ್ಕ ಭಾವನಿಗೆ ಪೇಡ ಕೊಟ್ಟು ಹೇಳೋಂತ ವಿಷಯ ಇದೆ...'' ಎಂದು ಪೀಡಿಸಿದ. ''ಹಾಗೇ ಹೇಳಯ್ಯ ವಿಷಯ ಏನೂಂತ'' ಅಂತ ನಾನು ಕೇಳಿದಾಗ, ಅವನು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ನನ್ನ ಹೆಂಡತಿ ಕೊಟ್ಟ ಹಣವನ್ನು ಜೇಬಿಗೆ ಹಾಕಿಕೊಂಡು ಪೇಟೆಯ ಕಡೆಗೆ ಓಡಿದ. ನನ್ನ ಹಣದಲ್ಲೇ ಪೇಡ ತಂದು ನನ್ನ ಕೈಗೊಂದು ಕೊಟ್ಟು, ''ಭಾವ ನನ್ಗೆ ಕೆಲ್ಸ ಸಿಕ್ತು'' ಅಂತ ಹೇಳಿ ನನ್ನ ಕೈಹಿಡಿದು ಎಳೆದಾಡಿದ.

''ಸಂತೋಷಾಪ್ಪ. ಅಂತೂ ಇಷ್ಟು ವರ್ಷದ ಮೇಲಾದ್ರೂ ಸಿಕ್ತಲ್ಲ ಬಿಡು. ಅಂಥ್ದಾಗೆ ಯಾವ ಕಂಪನಿ?'' ಎಂದು ಕೇಳಿದೆ. ಇವನಂತಹ ಶುದ್ಧ ಶುಂಠನಿಗೆ ಯಾರು ಕೆಲಸ ಕೊಟ್ರು ಎಂದು ನಾನು ಅಚ್ಚರಿ ಪಟ್ಟೆ.

''ಕಂಪನಿ ಅಲ್ಲ ಭಾವ. ವಿಧಾನ ಸೌಧದಲ್ಲಿ'' ಎಂದು ಅವ ಹೇಳಿದಾಗ ನನಗೆ ಒಂದು ರೀತಿಯಲ್ಲಿ ಸಮಾಧಾನವಾಯ್ತು. ನೌಕರಿ ಸಿಕ್ಕಿದ್ದರಿಂದ, ಅವನಿಗೂ ಒಂದು ಮದುವೆ ಮಾಡಿ, ಮನೆಯಿಂದ ಹೊರಗೆ ಹಾಕಿ, ನೆಮ್ಮದಿಯಿಂದಿರಬಹುದೆಂದು ನಾನು

ಭಾವಿಸಿದೆ. ಅದೊಂದು ದಿನ ಬೆಳಿಗ್ಗೆಯಿಂದ ಕರಂಟೇ ಬಂದಿರಲಿಲ್ಲ. ರಾತ್ರಿ ಒಂಭತ್ತರ ಸುಮಾರಿಗೆ ಲೈಟು ಬಂದಾಗ ನಾನು ರೂಮಿನಲ್ಲಿ ದೀಪಾ ಹಾಕಿ, ರಾಮಾಯಣವನ್ನು ಓದಲು ಕೂತೆ. ಎಲ್ಲಿಂದ ಬಂದನೋ ಶ್ರೀಕಂಠು ಥಟ್ಟನೆ ಲೈಟು ಆರಿಸಿದ. ''ಯಾಕಯ್ಯ ಲೈಟ್ ಆರಿಸ್ದೆ. ನಾನು ಓದ್ತಾಯಿರೋದು ಕಾಣಿಸ್ತಿಲ್ಲವೇನು ನಿನಗೆ'' ಎಂದು ರೇಗಿದೆ. ''ಅಯ್ಯೋ ಭಾವಯ್ಯ, ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಪರಿಸ್ಥಿತಿ ಹೇಗಿದೆ. ಏನ್ಕಥೆ. ನೀನು ಹೀಗೆ ಕರಂಟು ಪೋಲು ಮಾಡಿದ್ರೆ ಹೇಗೆ?'' ಅಂತ ನನಗೇ ತಿಳಿ ಹೇಳಿದ. ''ಎರಡು ದಿನ ವಿಧಾನಸೌಧದ ಚಾಕ್ರಿ ಮಾಡಿದ್ದಕ್ಕೇ, ಈ ಅಯೋಗ್ಯನಿಗೆ ಇಂಥಾ ವಿಪರೀತ ತಿಳುವಳಿಕೆ ಬಂದಿದ್ಯಲ್ಲಾ'' ಎಂದು ನನಗೆ ಸೋಜಿಗವಾಯ್ತು.

''ಅಲ್ಲಯ್ಯಾ ಓದೋದು, ಬರೆಯೋದು ಮಾಡಿದ್ರೆ ವಿದ್ಯುತ್ ಶಕ್ತಿ ಪೋಲು ಮಾಡಿದ ಹಾಗಲ್ಲಪ್ಪ...'' ''ಅಲ್ಲ ಭಾವಯ್ಯ, ಈ ರಾಮಾಯಣದ ಪುಸ್ತಕ ಎಷ್ಟು ಸಲ ಓದಿದ್ದೀರಿ. ಓದಿದ್ದನ್ನೇ ಓದೋಕ್ಕೆ ಸುಮ್ನೆ ಕರಂಟು ಯಾಕೆ ವೇಸ್ಟ್ ಮಾಡ್ತೀರಿ?'' ನಮ್ಮಿಬ್ಬರ ವಾಗ್ವಾದವನ್ನು ಕೇಳಿದ ನನ್ನ ಪತ್ನಿ ''ಹೌದು ಕಣ್ರಿ ಸುಮ್ನೆ ದೀಪ ಆರ್ಸಿ ಮಲಕ್ಕೋಳಿ. ರಾಮಾಯಣದ ಕಥೆ ನಿಮಗೆ ಗೊತ್ತಿದ್ಯಲ್ಲ. ಇನ್ಯಾಕೆ ಅದನ್ನ ಓದೀ ಓದೀ ಕಣ್ಣು ಹಾಳು ಮಾಡ್ಕೊತೀರಿ...'' ಎಂದು ತೀರ್ಪು ನೀಡಿದಾಗ ನಾನು ವಿಧಿಯಿಲ್ಲದೆ ಮುಸುಕು ಹೊದ್ದು ಮಲಗಿದೆ.


ಆದಿನ ಕಛೇರಿಯಿಂದ ನಾನು ಬಂದಾಗ ಮನೆಯಲ್ಲಿನ ವಾತಾವರಣವೇ ಬದಲಾದಂತಿತ್ತು. ಬಲ್ಬುಗಳ ಬದಲು, ಮನೆಯಲ್ಲಿ ಎಲ್ಲಾ ಕಡೆಯೂ ಟ್ಯೂಬ್ ಲೈಟ್ ಹಾಕಿಸಿದ್ದ ಶ್ರೀಕಂಠು. ''ನೋಡಿ ಭಾವ, ಬಲ್ಬುಗಳಿಗಿಂತ ಟ್ಯೂಬ್ ಲೈಟುಗಳು ಕರೆಂಟು ಹೆಚ್ಚಾಗಿ ಎಳ್ಕೊಳೋಲ್ಲ. ಎಲೆಕ್ಟ್ರಿಕ್‌ಸಿಟಿ ಕನ್‌ಸಮ್‌ಷನ್ನೂ ಕಡಿಮೆಯಾಗುತ್ತೇಂತ, ಬಲ್ಬುಗಳನ್ನ ತೆಗೆಸಿ ಟ್ಯೂಬ್‌ಲೈಟ್ ಫಿಕ್ಸ್ ಮಾಡ್ಸಿದ್ದೀನಿ...'' ಎಂದ ಹೆಮ್ಮೆಯಿಂದ. ಮಾಮೂಲಾಗಿ ಎಂಟು ಘಂಟೆಗೆ ಕರಂಟು ಬಂದಾಗ ಸ್ವಿಚ್ಚುಗಳನ್ನು ಅದುಮಿದ. ಒಂದು ಟ್ಯೂಬಾದರೂ ಹತ್ತಿಕೊಳ್ಳದೆ ಹೋದುದು ನೋಡಿ ಅವನು ಪೆಚ್ಚಾದ. ಅವನು ಹಾಗೇ ಪರದಾಡುತ್ತಿದ್ದಾಗ ''ಅಲ್ಲಯ್ಯಾ ಅರವತ್ತು ಕ್ಯಾಂಡ್ಲು ಬಲ್ಬೇ ಮೂವತ್ತು ಕ್ಯಾಂಡಲಿನ ಹಾಗೆ ಉರಿಯೋವಾಗ, ಈ ಲೋ ವೋಲ್ಟೇಜಿನಲ್ಲಿ ಟ್ಯೂಬ್ ಲೈಟ್ ಹತ್ತಿಕೊಳ್ಳುತ್ತೇನಯ್ಯ. ನೀನೇ ಒಂದು ಟ್ಯೂಬ್ ಲೈಟು. ಇದೆಲ್ಲಾ ನಿನಗೆಲ್ಲಿ ತಿಳಿಯುತ್ತೆ'' ಎಂದು ನಾನು ಮೂಗು ಮುರಿದಾಗ, ಅವಳು ತಮ್ಮನ ಸಪೋರ್ಟಿಗೆ ಧಾವಿಸಿದಳು. ''ಸಾಕು ಸುಮ್ನಿರಿ. ಟ್ಯೂಬ್ ಲೈಟ್ ಉರೀದಿದ್ರೆ ಏನಂತೆ. ಆ ಹಾಳು ಬಲ್ಬುಗಳಿಗಿಂತ ಎಷ್ಟು ಲಕ್ಷಣವಾಗಿ ಕಾಣಿಸುತ್ತೆ.'' ಎಂದು ನನ್ನಾಕೆ ದಬಾಯಿಸಿದಾಗ ಶೀತಲ ಯುದ್ಧಕ್ಕೆ ಅವಕಾಶ ಕೊಡದೆ ನಾನು ತೆಪ್ಪಗಾದೆ.

ಮಂಗಳವಾರ ನಾನು ಕಛೇರಿ ಬಿಟ್ಟಾಗಲೇ ಬಲು ಲೇಟಾಗಿ ಹೋಗಿತ್ತು. ಮನೆಗೆ ಬರುವವೇಳೆಗೆ ಕತ್ತಲಾಗಿತ್ತು. ಅಪರೂಪಕ್ಕೆ ಅಕ್ಕಪಕ್ಕದ ಮನೆಗಳಲ್ಲಿ ದೀಪ ಉರಿಯುತ್ತಿತ್ತು. ನಮ್ಮ ಮನೆಯಲ್ಲಿ ಕತ್ತಲು ಕವಿದುಕೊಂಡಿತ್ತು. ''ಇವಳು ಯಾಕಿನ್ನೂ ದೀಪ ಹಚ್ಚಿಲ್ಲ'' ಎಂದು ಗೊಣಗುಟ್ಟುತ್ತಲೇ ನಾನು ಒಳಬಂದೆ. ಶ್ರೀಕಂಠು ನಾಲ್ಕಾರು ಸೀಮೆ ಎಣ್ಣೆ

ಬುಡ್ಡಿಗಳನ್ನು ಸಾಲಾಗಿಟ್ಟುಕೊಂಡು, ದೀಪ ಹಚ್ಚುತ್ತಿದ್ದ. ''ಏನಾಯ್ತಪ್ಪಾ, ಫ್ಯೂಸ್ ಹೋಯ್ತೇನು?'' ಎಂದು ನಾನು ವಿಚಾರಿಸಿದೆ. ಅವನು ಮುಗುಮ್ಮಾಗಿದ್ದ. ನನ್ನ ಹೆಂಡತಿಯೇ ಒಳಗಿನಿಂದ ಬಂದು ಸಮಜಯಾಸಿ ಕೊಟ್ಟಳು.

''ನೋಡಿ, ನಮ್ಮ ಶ್ರೀಕಂಠು ಬುದ್ಧೀನ. ಎರಡು ತಿಂಗಳಿಂದ ಎಲೆಕ್ಟ್ರಿಕ್ ಬಿಲ್ ಕಟ್ಟದೆ ಆ ಹಣಾನ ಉಳಿಸಿದಾನೆ. ಬೆಳಿಗ್ಗೆ ಎಲೆಕ್ಟ್ರಿಕ್ ಆಫೀಸಿನವರೇ ಬಂದು ಲೈನ್ ಡಿಸ್‌ಕನೆಕ್ಟ್ ಮಾಡಿ ಹೋದ್ರು...'' ಎಂದು ಅವಳು ಹೇಳಿದಾಗ ಇದೆಂಥಾ ಬುದ್ಧಿವಂತಿಕೆಯೆಂಬುದೇ ನನಗೆ ಅರ್ಥವಾಗಲಿಲ್ಲ. ''ಏನಯ್ಯಾ ನಿನ್ನ ಹುಡುಗಾಟ?'' ಎಂದು ನಾನು ಅವನನ್ನು ಗದರಿಸಿದೆ. ''ಭಾವ, ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ಎಷ್ಟಿದೆ ಅಂಬೋದು ನಿಮಗೆ ಗೊತ್ತಿರಬಹುದು. ಈ ವಿಚಾರದಲ್ಲಿ ಜನರ ಸಹಕಾರ ಅತ್ಯಗತ್ಯ. ಅರ್ಧಂಬರ್ಧ ಕರಂಟು ಉಪಯೋಗಿಸಿ ವಿದ್ಯುಚ್ಛಕ್ತಿ ಮಂಡಳಿಗೆ ಸಹಕಾರ ಕೊಡೋ ಬದ್ಲು, ಪೂರ್ತಿಯಾಗಿ ಕರಂಟನ್ನೇ ಉಪಯೋಗಿಸದೆ ಮಂಡಳಿಗೆ ಸಂಪೂರ್ಣ ಸಹಕಾರ ಕೊಡೋಣಾಂತ ಹೀಗೆ ಮಾಡಿದೆ ಭಾವ....'' ಎಂದು ಶ್ರೀಕಂಠು ಹೇಳಿದಾಗ ನನಗೆ ಮೈ ಪರಚಿಕೊಳ್ಳುವಂತಾಯ್ತು. ''ವಿಧಾನಸೌಧದಲ್ಲೇ ಇವನ ಸರ್ವಿಸು ಮುಂದುವರೆದರೆ ನನ್ನ ಮನೆಯಲ್ಲಿ ಮತ್ತೆ ಎಂತೆಂಥಹ ಸುಧಾರಣೆಗಳನ್ನು ತರುತ್ತಾನೋ ಈ ಅಯೋಗ್ಯ ಎಂದು ನಾನು ಪೇಚಾಡಿಕೊಂಡೆ.

''ಟೆಲಿಫೋನ್ ಸರಂಡರ್ ಮಾಡಿದ್ರೂ ಟ್ಯಾಕ್ಸ್ ಕೊಡೂ
ಅಂತ ಕೂತಿದಾರಲ್ಲೆ''



ವಿಧಿ ವಿಲಾಸ - ಭಾಗ 2

- ಭೂಷಿ

ಸ್ಟಾಫ್... ಕಾಲೇಜ್ ಪ್ರವೇಶ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆಯುವ ಆತುರದಲ್ಲಿ ಒಂದು ಸ್ಪರ್ಧಾತ್ಮಕ ಪರೀಕ್ಷೆಗೆ ಹೇಗೆ ತಯಾರಿ ನಡೆಸಬೇಕು ಎನ್ನುವ ಬಗ್ಗೆ ಸ್ವಲ್ಪವೂ ಯೋಚಿಸಲಿಲ್ಲ. ''ಏನು ಮಹಾ' ಅನ್ನುವ ಧೋರಣೆಯನ್ನೇ ತಳೆದು ಪರೀಕ್ಷೆಗೆ ಕೂತೆ.... ಗೊತ್ತೇ ಇದೆಯಲ್ಲಾ ಫಲಿತಾಂಶ!... ಕೂತೆ..... ಸೋತೆ!

ಸೋತಮೇಲೆ ಎಚ್ಚೆತ್ತೆ. ಪರೀಕ್ಷೆಗೆ ಮುಂಚೆ ತಿಳಿದುಕೊಳ್ಳುವಂತಹ ವಿಷಯಗಳು ಬೇಕಾದಷ್ಟಿವೆ ಅಂತ ಅರಿವಾಯಿತು. ಎರಡನೇ ಸಲ ಸರಿಯಾಗಿ ತಯಾರಿ ನಡೆಸಿ ರ್‍ಯಾಂಕ್ ಪಡೆಯಲೇ ಬೇಕೆಂದು ಮನಸ್ಸು ಮಾಡಿ ಹೆಸರು ನೊಂದಾಯಿಸಿಕೊಂಡೆ. ಪರೀಕ್ಷೆಗೆ ಪೂರ್ವಭಾವಿಯಾಗಿ ಕಮಾಂಡ್ ಹೆಡ್‌ಕ್ವಾರ್ಟರ್ಸ್ ನಡೆಸುತ್ತಿದ್ದ ಒಂದು ತಿಂಗಳ Pre Staff College ಕೋರ್ಸ್‌ಗೆ ಸಹ ಅಪ್ಲೈ ಮಾಡಿದೆ. ಈ ಸಲ ಈ ಕೋರ್ಸನ್ನು ಡೆಹ್ರಾಡೂನಿನ IMA ನಲ್ಲಿ ನಡೆಸಿದರು. ಕೋರ್ಸ್‌ಗೆ ಹೋಗಲು ರಜ ಪಡೆಯಬೇಕಾಗಿತ್ತು. ರಜ ಪಡೆದು, ಹೆಂಡತಿ ಮಕ್ಕಳನ್ನೂ ಕರೆದುಕೊಂಡು, ಎಂಟು ಒಂಭತ್ತು ವರ್ಷಗಳ ಮೇಲೆ ಮತ್ತೆ ಅಕಾಡಮಿಗೆ ಭೇಟಿ ಕೊಟ್ಟೆ.

ಒಬ್ಬ ಕೆಡೆಟ್ ದೃಷ್ಟಿಗೂ, ಒಬ್ಬ ''ಪ್ರವಾಸಿ'' ದೃಷ್ಟಿಗೂ ಅಜಗಜಾಂತರ ವ್ಯತ್ಯಾಸ ಅನ್ನುವುದು ಚೆನ್ನಾಗಿ ಅನುಭವಕ್ಕೆ ಬಂತು. ಅಕಾಡಮಿಯ ಭವ್ಯ ಸೌಧಗಳು ಭವ್ಯವಾಗಿ ತೋರಿದವೇ ಹೊರತು, ಆತಂಕ ಹುಟ್ಟಿಸುತ್ತಿದ್ದ ಕತ್ತಲೆ ಕೋಣೆಗಳ ಜೈಲು ಕಟ್ಟಡಗಳೆಂದು ಅನಿಸಲಿಲ್ಲ. ಅಲ್ಲಿಯ ಪ್ರಶಾಂತ ಪರಿಸರ, ಸಾಲುಮರಗಳಿಂದ ಅಲಂಕೃತವಾದ ರಸ್ತೆಗಳು, ಆಟದ ಬಯಲುಗಳು, Tons ನದಿ.... ಇವೆಲ್ಲಾ ಮನ ತಣಿಸುವ ದೃಶ್ಯಗಳಾಗಿದ್ದವೇ ಹೊರತು, ತ್ರಾಸ ಕೊಡುವ ತಾಣಗಳಾಗಿರಲಿಲ್ಲ!.... ಅಂತೂ ಒಂದು ತಿಂಗಳು ವಿಶ್ರಾಂತಿ, ಮನೋಲ್ಲಾಸ, ಜೊತೆಗೆ ಒಂದಿಷ್ಟು ಜ್ಞಾನ ವೃದ್ಧಿ ಪಡೆದುಕೊಂಡು ಹಿಂತಿರುಗಿದೆ.... ತಯಾರಿ ಷುರುಮಾಡಿದೆ.... ಅಷ್ಟರಲ್ಲಿ ನನಗೆ ಝಾನ್ಸಿಯಿಂದ ಎತ್ತಂಗಡಿ ಆಯಿತು!

ಈ ಸಲ ನನಗೆ ನಿಜವಾದ ''ಆಫೀಸರ್ ಕಮಾಂಡಿಗ್'' ಪದವಿ ಕೊಟ್ಟು ಜಮ್ಮುವಿನಲ್ಲಿದ್ದ ವರ್ಕ್‌ಷಾಪೊಂದಕ್ಕೆ ಪೋಸ್ಟ್ ಮಾಡಿದರು!

★★★

ಜಮ್ಮುಗೆ ಫೀಲ್ಡ್ ಏರಿಯಾ (field area) ಎಂಬ ಹೆಸರಿತ್ತು. ಅಂದರೆ ಯುದ್ಧ ಕ್ಷೇತ್ರದಲ್ಲಿನ ಪ್ರದೇಶ ಅಂತ. ಸಾಮಾನ್ಯವಾಗಿ, ಇಂತಹ ಪ್ರದೇಶದಲ್ಲಿ ಸಂಸಾರ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಸರ್ಕಾರ ಯಾವ ಅನುಕೂಲಗಳನ್ನೂ ಇದಕ್ಕಾಗಿ ಹೊಂದಿಸುವುದಿಲ್ಲ....ಒಂಟಿ ಜೀವನ, ಟೆಂಟ್‌ವಾಸ, ಮುಕ್ಕಾಲುಪಾಲು ಆಕಾಶದ

ಕೆಳಗೇ ಕೆಲಸ... ಇತ್ಯಾದಿ, ಇತ್ಯಾದಿ. ಆದರೆ ಕಾಲಕ್ರಮೇಣ ಇಲ್ಲಿದ್ದ ಎಲ್ಲಾ ಯೂನಿಟ್‌ಗಳೂ ಬಹಳ ಕಾಲದಿಂದ ಒಂದೇ ಜಾಗದಲ್ಲಿ ತಳ ಊರಿದ್ದುದರಿಂದ ಕೆಲವು ಸವಲತ್ತುಗಳನ್ನು ಸ್ವಂತ ಪರಿಶ್ರಮದಿಂದ ಕಲ್ಪಿಸಿಕೊಂಡಿದ್ದರು. ಅಧಿಕೃತವಾಗಿ ಸಂಸಾರ ಹೂಡಲು ಮನ್ನಣೆ ಇರದಿದ್ದರೂ, ಕ್ಷೇತ್ರೀಯ ಮಿಲಿಟರಿ ಅಧಿಕಾರಿಗಳ ಅನಧಿಕೃತ ಮನ್ನಣೆಯಿಂದಾಗಿ, ಹೆಂಡತಿ ಮಕ್ಕಳೊಡನೆ ಇರಲು ಅವಕಾಶ ಸಹ ಕಲ್ಪಿಸಿಕೊಂಡಿದ್ದರು.... ಹೀಗಾಗಿ ನನಗೂ ಸಂಸಾರ ಸಮೇತ ಜಮ್ಮುವಿಗೆ ಹೋಗಲು ಅಪ್ಪಣೆ ದೊರೆಯಿತು.... ಹೊರಟೆ.

★★★

ಮೊದಲ ಬಾರಿಗೆ, ಮಿಲಿಟರಿ ವಿದಾಯದ ವೈಖರಿ ನಾನು ಝಾನ್ಸಿ ಬಿಟ್ಟಾಗ ಅರಿವಾಯಿತು. ಮೂರೂವರೆ ವರ್ಷಕ್ಕಿಂತಲೂ ಜಾಸ್ತಿ ಸಮಯದಲ್ಲಿ ನಾನು, ನನ್ನ ಹೆಂಡತಿ ಆರ್ಮರ್ಡ್ ಡಿವಿಜನ್‌ಗೆ ಪೂರ್ತಿ ಹೊಂದಿಕೊಂಡುಬಿಟ್ಟಿದ್ದೆವು. ರೈಲ್ವೆ ಸ್ಟೇಷನ್‌ನಲ್ಲಿ ನಮ್ಮ ಬೃಹತ್ EME ಬಳಗದ ಪ್ರತಿನಿಧಿಗಳಲ್ಲದೆ, ಡಿವಿಜನ್‌ನ ಇತರ ಅಂಗಗಳ ಪ್ರತಿನಿಧಿಗಳೂ, ಕೆಲವು ಕ್ರೀಡಾಪಟುಗಳೂ ಸಹ ಹಾಜರಿದ್ದರು. ಈ 'ಇತರರ' ಹಾಜರಿ ಸ್ವಲ್ಪ ವಿಶೇಷವೆಂದೇ ಹೇಳಬೇಕು ಒಬ್ಬ ಜೂನಿಯರ್ ಆಫೀಸರ್‌ಗೆ ವಿದಾಯ ಹೇಳಲು ಅವನ ಯೂನಿಟ್‌ನವರಷ್ಟೇ ರೈಲ್ವೆ ಸ್ಟೇಷನ್‌ಗೆ ಹೋಗುವುದು ವಾಡಿಕೆ.... ನನಗೆ, ಈ ತರಹೆಯ ಮರ್ಯಾದೆ ದೊರೆತದ್ದು ಕಂಡು, ಒಂದು ತರಹ ಹೆಮ್ಮೆ ಬಂತು ನಾನು ಸ್ಟೇಷನ್ ಸೇರಲು ತಡವಾಯಿತು. ಕಾರಣ ನಮ್ಮ EME JCO ಗಳು ತಮ್ಮದೇ ಆದ ವಿಶೇಷ ಪಾರ್ಟಿಯಲ್ಲಿ ನನ್ನನ್ನು ಕಟ್ಟಿಹಾಕಿದ್ದರು. ಹೆಂಡತಿ, ಮಕ್ಕಳು ಮೊದಲೇ ಸ್ಟೇಷನ್ ಸೇರಿದ್ದರು. ರೈಲು ಬಂದೊಡನೆಯೇ ನಾನು ದೆಹಲಿಗೆ ಹೋಗುವ ಕಂಪಾರ್ಟ್‌ಮೆಂಟನ್ನು ಹೂವಿನ ಹಾರಗಳಿಂದ ಅಲಂಕರಿಸಿದ್ದರು. ರೈಲು ಪ್ಲಾಟ್‌ಫಾರ್ಮ್ ಸೇರುವುದಕ್ಕೂ ನಾನು ಸ್ಟೇಷನ್ ಸೇರುವುದಕ್ಕೂ ಸರಿಹೋಯಿತು.... ಆಮೇಲೆ ಎಲ್ಲರ ಕೈಕುಲುಕಿ, ಹಾರ ಹಾಕಿಸಿಕೊಂಡು ರೈಲು ಹತ್ತಲು ತಡವಾಯಿತು. ಗಾರ್ಡ್ ಮತ್ತು ಡ್ರೈವರ್ ಸಹ ಸಂಯಮ ತೋರಿದರು.... ''ಜೆ, ಜೈ'' ಕಾರಗಳ ಮಧ್ಯೆ ರೈಲು ಹೊರಟಿತು... ಅಂತೂ ಹೆಮ್ಮೆ ಮತ್ತು ಸಂತಸದಿಂದ ಹೊರಟೆ.

★★★

ಜಮ್ಮು ಸೇರಿದ ಒಡನೆಯೇ ನಾನು ರಿಲೀವ್ ಮಾಡಬೇಕಾಗಿದ್ದ ಮೇಜರ್ ತಾನಿದ್ದ 'ಮನೆ'ಯನ್ನು ನನಗೆ 180 ರೂಪಾಯಿಗಳಿಗೆ ಮಾರಿದ! ನಾನೂ ಮನೆ ಮಾಲೀಕನಾದೆ! ಇಟ್ಟಿಗೆ ಗೋಡೆ, ಹುಲ್ಲು ಛಾವಣಿ ಆದರೆ ಮಣ್ಣಿನ ನೆಲ (ಒಂದು ರೂಂನ ಮಟ್ಟಿಗೆ ಸಿಮೆಂಟ್‌ನೆಲ) ಆದರೆ ಇದ್ದುದರಲ್ಲಿ ಅನುಕೂಲಕರ! ಮನೆಯ ಸುತ್ತಲೂ ಹುಲ್ಲಿನ ಚಾಪೆಯ ಕಾಂಪೌಂಡ್‌ಗೋಡೆ. ಕಾಂಪೌಂಡ್ ಒಂದು ಮೂಲೆಯಲ್ಲಿ ಹೊರಚ್ಚಾಗಿ ಅಡಿಗೆಮನೆ! ಮನೆ, ತವಿ ನದಿಗೆ ಮುಖಮಾಡಿತ್ತು. ನದಿ ಅನತಿ ದೂರದಲ್ಲಿ ಹರಿಯುತ್ತಿತ್ತು... ಮೊದಲ ರಾತ್ರಿ ನದಿಯ ಆಚೆ ದಡದಲ್ಲಿ

ಒಂದೆರಡು ಬೆಂಕಿ ಜ್ವಾಲೆಗಳು ಕಾಣಿಸಿಕೊಂಡವು! ಏನೆಂದು ಕೇಳಲು 'ಸ್ಮಷಾಣ' ಎಂದು ತಿಳಿಯಿತು! ... ಮನೆಯವರ ನೆಮ್ಮದಿಗಾಗಿ ಮುಂದಿನ ಗೋಡೆ ತಕ್ಷಣ ಎತ್ತರಿಸಿದ್ದಾಯಿತು!

ಮಾರನೇ ದಿನ ಅಡಿಗೆ ಮನೆ ಸಜ್ಜುಮಾಡಲು ಮಡದಿ ಹೊರಟಳು... ಕೆಲವೇ ಕ್ಷಣಗಳಲ್ಲಿ ಕಿಟಾರನೆ ಕಿರುಚುತ್ತಾ ಹೊರಗೆ ಓಡಿ ಬಂದಳು! ಬಾಯಿಂದ ಮಾತು ಹೊರಡುವುದು ಕಷ್ಟವಾಗಿತ್ತು.... ''ಹಾ....ಹಾ....ಹಾ....ವು'' ಅಂತ ಅಡಿಗೆ ಮನೆ ಕಡೆ ಬೆರಳು ತೋರಿಸಿದಳು! ಹೋಗಿ ನೋಡಿದೆ... ಸ್ವಲ್ಪ ಕತ್ತಲು ಕತ್ತಲಾಗಿದ್ದ ಅಡಿಗೆ ಮನೆಯಲ್ಲಿ ಒಂದು ಹಳೆಯ ಡಬ್ಬ ನೆಲದ ಮೇಲೆ ಬಿದ್ದಿತ್ತು... ಹತ್ತಿರದಲ್ಲೆ 5, 6 ನಾಗರ ಹಾವಿನ ಮರಿಗಳು ವಿಲವಿಲನೆ ಚಲಿಸುತ್ತಾ ಗೋಡೆಯಲ್ಲಿ ನುಸುಳಲು ಜಾಗ ಹುಡುಕುತ್ತಿದ್ದವು!

ಸರಿ, ಮತ್ತೊಂದು ಎಮರ್ಜೆನ್ಸಿ ಬಂತು.... ಹೆಂಡತಿ, ''ಮನೆಗೆ ಅಂಟಿದ ಹಾಗೆ, ಗಾಳಿ ಬೆಳಕು ಇರುವ, ಇದ್ದುದರಲ್ಲಿ ಮಾಡರ್ನ್ ಆಗಿರುವ ಅಡಿಗೆ ಮನೆ ಕಟ್ಟಿಸಿದ ಹೊರತು ಅಡಿಗೆ ಸಾಧ್ಯವಿಲ್ಲ'' ಅಂದಳು. ''ಜೀ ಹುಜೂರ್'' ಅಂತ ಎರಡು ದಿನದಲ್ಲಿ ಕಟ್ಟಿಸಬೇಕಾಯಿತು... ಡಾಲ್ಡಾ ಡಬ್ಬಗಳನ್ನು ಬಿಚ್ಚಿ ಹಾಳೆಗಳಾಗಿ ಮಾಡಿ, ಅವುಗಳಿಂದ ಸಿಂಕ್ ತಯಾರಿಸಿದೆವು. ಆ ಹಾಳೆಗಳಿಂದಲೇ ಡ್ರೇನ್ ಪೈಪ್ ಮಾಡಿ ಹಾಕಿದೆವು... ಇಟ್ಟಿಗೆ ಸಿಮೆಂಟ್ ಪ್ಲಾಟ್‌ಫಾರಂ ಕಟ್ಟಿದೆವು... ಹೆಂಡತಿಗೆ ಸಮಾಧಾನವಾಯಿತು.

ಇದರಿಂದ ಒಂದು ಪಾಠ ಕಲಿತೆ.... ಮನೆಗಳನ್ನು ಕಟ್ಟಲು ವರ್ಕ್‌ಷಾಪ್ ಕೊಡುಗೆ ಎಷ್ಟು ಅಂತ! ಕೂಡಲೇ ನನ್ನ ಮನೆಯನ್ನಲ್ಲದೆ ನನ್ನ ಸೆಕೆಂಡ್ ಇನ್‌ಕಮಾಂಡ್ ಆಗಿದ್ದ ಕ್ಯಾಪ್ಟನ್ ಇದ್ದಮನೆ, ಎರಡು ಬ್ಯಾಚಲರ್ಸ್ ಕ್ವಾರ್ಟರ್ಸ್.... ಎಲ್ಲವನ್ನೂ ವರ್ಕ್‌ಷಾಪಿಗೆ ವರ್ಗಾಯಿಸಿದೆ... ಮನೆಗಳಿಗೆ ತಿಂಗಳಿಗೆ 10 ರೂಪಾಯಿ, ಬ್ಯಾಚಲರ್ಸ್ ಕ್ವಾರ್ಟರ್ಸ್‌ಗೆ 5 ರೂಪಾಯಿ ಎಂದು ನಿಗದಿ ಮಾಡಿದೆ... ಸ್ವಲ್ಪ ನೆಮ್ಮದಿ ಬಂತು!

★★★

ಈ ಪ್ರಸಂಗದಲ್ಲಿ ಮುಖ್ಯವಾಗಿ ನನ್ನ ಸ್ಟಾಫ್ ಕಾಲೇಜ್ ಪ್ರವೇಶ ಪರೀಕ್ಷೆಯ 'ಕಾಂಡ'ವನ್ನೇ ತಿಳಿಸುವ ಅಂತ ಅಂದುಕೊಂಡಿದ್ದೇನೆ.... ಜಮ್ಮುವಿನಲ್ಲಿ ನಡೆಸಿದ ಜೀವನದಲ್ಲಿನ ಕುತೂಹಲಕಾರಿ ಅಂಶಗಳನ್ನು ಮುಂದಿನ ಪ್ರಸಂಗಕ್ಕೆ ಮುಂದೂಡುತ್ತೇನೆ. ಅನ್ಯಥಾ ಭಾವಿಸಬೇಡಿ!

★★★

ನಾನು ಕೆಲಸ ವಹಿಸಿಕೊಂಡ ಕೆಲವೇ ವಾರಗಳಲ್ಲಿ ನನಗೂ ನಮ್ಮ ಡಿವಿಜನಲ್ ಹೆಡ್‌ಕ್ವಾರ್ಟರ್ಸ್‌ನಲ್ಲಿಯ CEME ಅವರಿಗೂ ವಿರಸ ಷುರು ಆಯಿತು. ''ಇದೇನು? ಹೋದ ಕಡೆಯಲ್ಲೆಲ್ಲಾ ಮೇಲಧಿಕಾರಿಗಳೊಡನೆ ವಿರಸ ಷುರು ಆಗುತ್ತೆ ಅಂದರೆ ಏನರ್ಥ? ನಿನ್ನದೇ ಏನೋ ತಪ್ಪು ಇರಬೇಕು!'' ಅಂತ ನೀವು ಹೇಳುವುದು ಸಹಜವೇ. ನನ್ನ ಹೆಂಡತಿ ಅಭಿಪ್ರಾಯನೂ ಅಷ್ಟೇ. ''ಮಿಸಕಿದ್ದಕ್ಕೆಲ್ಲಾ ಜಗಳ ತೆಗೆಯುವ ಬುದ್ಧಿ''

ಅಂತ ಅಂತಾರೇ ಇರ್ತಾಳೆ.... ಈಗಲೂ. ಏನೇ ಇರಲಿ.... ನನ್ನ ಮಟ್ಟಿಗೆ ಹೇಳುವುದಾದರೆ, ಇದರಲ್ಲೂ ಸಹ ನನ್ನ ತಪ್ಪೇನೂ ಇರಲಿಲ್ಲ ಅಂತ ಸಾಬೀತು ಮಾಡಲು ತಕ್ಕಷ್ಟು ಪುರಾವೆ ಇದೆ... ಆದರೆ ಅದು ಅಪ್ರಸ್ತುತ. ವಿರಸ ಉಂಟಾಗಿದ್ದು ನಿಜ... ಪ್ರಸ್ತುತ!

ಈ ವಿರಸ ಸಹಜವಾಗಿಯೇ ಆತಂಕ ಹುಟ್ಟಿಸುವಂತಹುದು. ಈ ಕೆಲಸದಲ್ಲಂತೂ ಇದು ನನ್ನ Career ಗೇ ಹಾನಿ ಉಂಟು ಮಾಡುವಂತಹುದಾಗಿತ್ತು. ಏಕೆಂದರೆ ಮುಂದೆ ಲೆಫ್ಟಿನೆಂಟ್ ಕರ್ನಲ್ ರ್‍ಯಾಂಕ್‌ಗೆ ಪ್ರಮೋಷನ್‌ಗೆ, ನಾನು ಈ ಹುದ್ದೆಯಲ್ಲಿ ಪಡೆದ ಎರಡು ರಿಪೋರ್ಟ್‌ಗಳೇ ಮುಖ್ಯ ಆಧಾರ. ಮೇಜರ್‌ವರೆಗೂ ಸೀನಿಯಾರಿಟಿ ಮೇಲೆ ಪ್ರಮೋಷನ್ (ಪ್ರಮೋಷನ್ ಪರೀಕ್ಷೆಯಲ್ಲಿ ತೇರ್ಗಡೆ ಆಗಿದ್ದಲ್ಲಿ)... ಆಮೇಲೆಲ್ಲಾ ಕಾರ್ಯದಕ್ಷತೆ ಮೇಲೆ. ಈ ಕಾರ್ಯದಕ್ಷತೆ ಅಳೆಯುವವರಲ್ಲಿ ಮೊದಲಿಗರು.... CEME ಅವರು!

ಈ ವಿರಸದಿಂದಾಗಿ ನಾನು ಯಾವಾಗಲೂ ಸತರ್ಕನಾಗಿಯೇ ಇರಬೇಕಾದ ಸಂದರ್ಭ ಬಂತು. ಯಾವ ಸಮಯದಲ್ಲಿಯಾದರೂ ಏನಾದರೂ ನ್ಯೂನತೆ ಹುಡುಕಿ ನನಗೆ ಕಂಟಕ ತರಬಹುದಾಗಿತ್ತು. ಇದರಿಂದ ಸ್ಟಾಫ್ ಕಾಲೇಜ್ ಪರೀಕ್ಷೆಗೆ ಓದುವುದಕ್ಕೆ ಅಡ್ಡಿ ಬಂತು... ಮನಸ್ಸು ಯಾವಾಗಲೂ ವರ್ಕ್‌ಷಾಪಿನ ಚಟುವಟಿಕೆಗಳ ಮೇಲೆ ಇತ್ತು.

ಮೊದಲ ವರ್ಷ CEME ಅವರು ನನ್ನ ವರ್ಕ್‌ಷಾಪ್ ತಪಾಷಣೆ ನಡೆಸಿ ಕೊಟ್ಟ ರಿಪೋರ್ಟ್ ಕೆಟ್ಟದಾಗಿಲ್ಲದಿದ್ದರೂ ಆತಂಕ ಹುಟ್ಟಿಸುವುದಾಗಿತ್ತು. ಎಲ್ಲಿ ಪ್ರತಿಕೂಲವಾಗುತ್ತೋ ಅಂತ ನಾನು ನಮ್ಮ ಡಿವಿಜನಲ್ ಕಮಾಂಡರ್ (GOC) ಅವರ ಬಳಿ Interview ಕೇಳಿಕೊಂಡೆ. ಆಗ GOC ಆಗಿದ್ದವರು ಮಾನೆಕ್ಷಾರವರು. ಅವರ ಮುಖ್ಯ ಸ್ಟಾಫ್ ಆಫೀಸರ್ ಲೆಫ್ಟಿನೆಂಟರ್ ಕರ್ನಲ್ ಕೃಷ್ಣರಾವ್ (ಈಗ ಜನರಲ್ ಕಾಶ್ಮೀರದ ರಾಜ್ಯಪಾಲರು). ಕೃಷ್ಣರಾವ್ ನನ್ನನ್ನು ಕರೆದು GOC ಯವರು Interview ಬದಲು ಖುದ್ದಾಗಿ ಬಂದು ನನ್ನ ವರ್ಕ್‌ಷಾಪ್ Inspect ಮಾಡುತ್ತಾರೆ ನಾಳೆಯೇ... ತಯಾರಾಗು ಅಂದರು! Inspection ಆಯಿತು. ಎಲ್ಲರ ಎದುರಿನಲ್ಲಿಯೂ GOC ನನಗೆ ಷಹಭಾಸ್‌ಗಿರಿ ಕೊಟ್ಟರು.. CEME ಅವರ ರಿಪೋರ್ಟ್ ಮೂಲೆಗೆ ಬಿತ್ತು!.... ಎರಡನೇ ರಿಪೋರ್ಟ್ ಬರೆಯುವ ಮೊದಲೇ ಅವರಿಗೆ ಪೋಸ್ಟಿಂಗ್ ಆಯಿತು... ಬದಲಿಗೆ ಬಂದವರು ಬಹಳ ''ಸಖತ್'' ಮನುಷ್ಯ ಅಂತ ಹೆಸರು ತೆಗೆದುಕೊಂಡಿದ್ದರು... ಆದರೆ ನನ್ನ ಮಟ್ಟಿಗೆ ಉದಾರಿಗಳಾಗಿಯೇ ಕಂಡರು... ಅವರ ರಿಪೋರ್ಟ್ ಬಹಳ ಅನುಕೂಲಕರವಾಗಿಯೇ ಇತ್ತು..... ಅದೃಷ್ಟ ಇನ್ನೂ ನನ್ನ ಕೈ ಬಿಟ್ಟಿಲ್ಲ ಅಂದುಕೊಂಡೆ... ಆದರೆ... 'ವಿಘ್ನೇಶ್ವರನ ಮದುವೆಗೆ ಸಾವಿರ ವಿಘ್ನಗಳು' ಅಂದ ಹಾಗೆ ನನ್ನ ಪರೀಕ್ಷೆ ತಯಾರಿಗೆ ಮತ್ತೊಂದು ವಿಘ್ನ ಆಗಲೇ ತಲೆ ಎತ್ತಿಕೊಂಡಿತ್ತು!

''ಜಮ್ಮು ಕಾಶ್ಮೀರದಲ್ಲಿರುವ ಎಲ್ಲಾ EME ವರ್ಕ್‌ಷಾಪುಗಳೂ ಭ್ರಷ್ಟಾಚಾರದಲ್ಲಿ ತೊಡಗಿವೆ. ಕಳಪೆ ಸಾಮಾನುಗಳನ್ನು ಹೆಚ್ಚು ಹೆಚ್ಚು ಬೆಲೆಕೊಟ್ಟು ಕೊಂಡು ಹಣ ಮಾಡಿಕೊಳ್ಳುತ್ತಿದ್ದಾರೆ'' ಅಂತ ಉದ್ಧಂಪುರದಲ್ಲಿದ್ದ ಕೋರ್ ಹೆಡ್ ಕ್ವಾರ್ಟರ್ಸ್‌ಗೆ ಸೆಕ್ಯೂರಿಟಿ ರಿಪೋರ್ಟ್ ಹೋಯಿತು. ಆರಂಭಿಕ ತನಿಖೆಯಲ್ಲೇ ''ಹುರಳಿಲ್ಲದ ಆಪಾದನೆ'' ಅಂತ ಬೇರೆ ಡಿವಿಜನಲ್ ಕಮಾಂಡರುಗಳು ಆರೋಪ ತಳ್ಳಿಹಾಕಿದ್ದರು. ಆದರೆ ನಮ್ಮ ಡಿವಿಜನಲ್ ಹಾಗಾಗಲಿಲ್ಲ. ಮೊನೆಕ್ಷಾರವರೂ ಸಹ ಪೋಸ್ಟಿಂಗ್ ಆಗಿ ಹೊರಟು ಹೋಗಿದ್ದರು ಅವರ ಜಾಗದಲ್ಲಿ ಬಂದಿದ್ದ 'ತಾತ್ಕಾಲಿಕ' GOC ರವರು Court of Inquiry ನಡೆಸಲು ಆದೇಶ ನೀಡಿದರು!

ನಾನೇನೋ ನಮ್ಮ ವರ್ಕ್‌ಷಾಪಿಗಾಗಿ ಬರೀ 8000 ರೂಪಾಯಿಗಳನ್ನು ಬಜಾರಿನಿಂದ ಸಾಮಾನು ಖರೀದಿಸಲು ಖರ್ಚು ಮಾಡಿದ್ದೆ! ಆದರೆ ನಮ್ಮ ವರ್ಕ್‌ಷಾಪಿನ ಮೇಲಿನ ಆರೋಪ ''2 ಲಕ್ಷ ಖರೀದಿ... ಕಡೆ ಪಕ್ಷ 20,000 ಕಮಿಷನ್ ಬಂದಿರಬೇಕು'' ಎಂಬ ಗುಮಾನಿ!! Court of Inquiry ಕೆಲವು ತಿಂಗಳುಗಳು ನಡೆಯಿತು ಎಲ್ಲಾ ವರ್ಕ್‌ಷಾಪುಗಳೂ ಆಪಾದನೆಯಿಂದ ಮುಕ್ತವಾದವು ಅನ್ನಿ... ಆದರೆ ಅಷ್ಟರೊಳಗೆ ನನ್ನ ಪರೀಕ್ಷೆ ಹತ್ತಿರ ಬಂದು ಬಿಟ್ಟಿತ್ತು... ಹೆಸರು ವಾಪಸ್ ಪಡೆಯಲು ಪ್ರಯತ್ನ ಪಟ್ಟೆ... ಸಾಧ್ಯವಾಗಲಿಲ್ಲ. ಈ ಸಲ ಔಪಚಾರಿಕವಾಗಿ ಪರೀಕ್ಷೆಗೆ ಕೂತೆ.... ನಿರೀಕ್ಷಿಸಿದಂತೆ ಸೋತೆ!

''ಏಕೋ ನಾನು ಆರ್ಮರ್ಡ್ ಡಿವಿಜನ್‌ನಲ್ಲಿ ತೆಗೆದುಕೊಂಡಿದ್ದ Challenge ಬರೀ ಬಡಾಯಿ ಆಗೇ ಉಳಿಯಿತಲ್ಲ'' ಅಂತ ಬೇಜಾರಾಯಿತು ಸ್ಟಾಫ್ ಕಾಲೇಜಿನ ಮೆಟ್ಟಿಲುಗಳನ್ನು ಹತ್ತುವ ಆಸೆ ಬಿಟ್ಟೆ... ಆದರೂ ಇನ್ನೂ ಒಂದು chance ಇತ್ತು (ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆಯಲು ಮೂರು chance ಇದ್ದವು) ಸಾಂಪ್ರದಾಯಿಕವಾಗಿ ಹೆಸರು ನೊಂದಾಯಿಸಿದೆ... ಆದರೆ ಓದಲು ಪ್ರಯತ್ನ ಮಾಡಲಿಲ್ಲ.

ಒಂದೂ ಮುಕ್ಕಾಲುವರ್ಷ ಜಮ್ಮುವಿನಲ್ಲಿ ಕಳೆದ ಮೇಲೆ ನನಗೆ ಮತ್ತೆ ಪೋಸ್ಟಿಂಗ್ ಬಂತು ಸಿಕಂದರಾಬಾದಿನಲ್ಲಿದ್ದ EME School ಗೆ... ಆದರೆ ಎಲೆಕ್ಟ್ರಾನಿಕ್ಸ್ ಇನ್ಸ್‌ಟ್ರಕ್ಟರ್ ಕೆಲಸಕ್ಕಲ್ಲ... ಅದಕ್ಕೆ ಕಾಲ ಮೀರಿತ್ತು ಅಂತ ಮೇಲಧಿಕಾರಿಗಳು ಭಾವಿಸಿದರೇನೋ.... ಸ್ಕೂಲ್ ಹೆಡ್‌ಕ್ವಾರ್ಟರ್ಸ್‌ನಲ್ಲಿ Training Staff Officer ಕೆಲಸಕ್ಕೆ!!

★★★

ಒಂದು ದಿನ ನಮ್ಮ ಸ್ಕೂಲಿನ ಕಮಾಂಡೆಂಟ್ (ಬ್ರಿಗೇಡಿಯರ್) ನನ್ನನ್ನು ಕರೆದು, ''ನೀನು ಸ್ಟಾಫ್ ಕಾಲೇಜ್ ಪರೀಕ್ಷೆಗೆ ಹೆಸರು ಕೊಟ್ಟಿದ್ದೀಯ ಅಲ್ಲವೇ?'' ಅಂತ ಕೇಳಿದರು. ''ಹೌದು'' ಅಂದೆ. ''ಓದು ಹೇಗೆ ನಡೆಯುತ್ತಿದೆ?'' ಅಂತ ಕೇಳಿದರು. ''ನಾನು ಆ ಪ್ರಯತ್ನ ಬಿಟ್ಟುಬಿಟ್ಟಿದ್ದೇನೆ ಸರ್'' ಅಂತ ಹೇಳಿ ನನ್ನ ಹಿಂದಿನ

ಪ್ರಯತ್ನಗಳ ಬಗ್ಗೆ ತಿಳಿಸಿದೆ. ''Staff College ಮೆಟ್ಟಿಲು ಹತ್ತುವ ಯೋಗ ನನಗಿಲ್ಲ'' ಅಂದೆ. ''ಛೆ! ಛೆ! ಹಾಗೆಲ್ಲಾ ಅನ್ನಬೇಡ. ಇನ್ನೂ ಟೈಂ ಇದೆ. ಓದು'' ಅಂದರು. ನಾನು ''ಸರ್ ಏನೂ ಪ್ರಯೋಜನವಿಲ್ಲ... ಈಗಾಗಲೇ ಪರೀಕ್ಷೆ ಹತ್ತಿರವಾಗಿದೆ..... ನಾನಾಗಲೇ 45 ದಿನದ ರಜ ಮುಗಿಸಿದ್ದೇನೆ.... ನಿಮ್ಮ ಪಾಲಿಸಿ ಪ್ರಕಾರ ಬಾಕಿ 15 ದಿನ ತೆಗೆದುಕೊಳ್ಳುವ ಹಾಗಿಲ್ಲ'' ಅಂದೆ. ""Special ಆಗಿ 15 ದಿನ Sanction ಮಾಡಿದ್ದೇನೆ... ಓದು!'' ಅಂದರು. ಒಂದೇಟು ಹೊಡೆದೆ... ''ಹೇಗಾಗುತ್ತೆ ಸರ್'' ಅಂದೆ! ''ಎಲ್ಲಾ ಆಗುತ್ತೆ last chance.. ಪ್ರಯತ್ನ ಬಿಡಬೇಡ'' ಅಂದರು! ಪರೀಕ್ಷೆ ಪುಣೆಯಲ್ಲಿ ನಡೆಯುತ್ತಿತ್ತು. ಸ್ವಂತ ಖರ್ಚಿನಲ್ಲಿ ಹೋಗಬೇಕಾಗಿತ್ತು. (ಮೊದಲನೇ chance ಮಟ್ಟಿಗೆ ಸರ್ಕಾರ TADA ಕೊಡುತ್ತಿತ್ತು)... ಏನು ಮಾಡುವುದು? ಕಮಾಂಡೆಂಟ್ ಆಜ್ಞೆಯಂತೆ ರಜೆ ಪಡೆದು ಓದಿದೆ. ನನ್ನ ಅದೃಷ್ಟ ಖುಲಾಯಿಸುತ್ತೋ ಏನೋ? ಈ ಬಲವಂತ ಮಾಘಸ್ನಾನ ನನಗೆ ಒಳ್ಳೆಯದಾಗಬಹುದೇನೋ ಎಂದು ಸಮಾಧಾನ ಪಟ್ಟುಕೊಂಡು ಪುಣೆಗೆ ಹೊರಟೆ.

ಪರೀಕ್ಷೆಯಲ್ಲಿ ಐದು ಪೇಪರ್‌ಗಳಿದ್ದವು. ನಾಲಕ್ಕನ್ನು ಚೆನ್ನಾಗಿಯೇ ಉತ್ತರಿಸಿದೆ. ಐದನೆ ಮತ್ತು ಕೊನೇ ಪೇಪರ್ Tactics ಗೆ ಸಂಬಂಧಪಟ್ಟದ್ದು ಅಂದರೆ. ಪ್ರಶ್ನೆ ಪತ್ರಿಕೆಯಲ್ಲಿ ಚಿತ್ರಿಸಿದ್ದ ಒಂದು ಯುದ್ಧದ ಸನ್ನಿವೇಶವನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿ ಒಂದು plan ತಯಾರಿಸಿ ಅದನ್ನು ಲಿಖಿತ ರೂಪದಲ್ಲಿ ತಿಳಿಸಬೇಕಾಗಿತ್ತು. ನಾನು ಸನ್ನಿವೇಶವನ್ನು ಗ್ರಹಿಸದೆ ಎಂದುಕೊಂಡು 5-6 ಪೇಜು ಉತ್ತರ ಬರೆದೆ. ಆಮೇಲೆ ಪ್ರಶ್ನೆಪತ್ರಿಕೆ ಹಿಂಬದಿಯಲ್ಲಿ ಕೆಲವು ಮಾಹಿತಿಗಳನ್ನು ನೋಡಿದೆ..... ''ಓಹೋ ನನ್ನ ಗ್ರಹಿಕೆ ತಪ್ಪು. ಈ ಸನ್ನಿವೇಶ ಭಿನ್ನ'' ಅಂತ ಅಂದುಕೊಂಡು ಬರೆದಿದ್ದನ್ನು ಹೊಡೆದುಹಾಕಿ, ಬೇರೆ ವಿಶ್ಲೇಷಣೆ ಮುಗಿಸಿ, ''ಪರವಾಗಿಲ್ಲ'' ಅಂತ ಹೊರಗೆ ಬಂದೆ! ಆದರೆ ಬಾಕಿ ಅಭ್ಯರ್ಥಿಗಳೊಡನೆ ವಿಚಾರ ವಿಮರ್ಶೆ ನಡೆಸಿದಾಗ ನನ್ನ ಮೊದಲನೆ ಗ್ರಹಿಕೆ ಸರಿ... ಎರಡನೆಯದು ತಪ್ಪು ಎಂದು ಮನದಟ್ಟಾಯಿತು..... ''ಎಲೆಕ್ಟ್ರಾನಿಕ್ಸ್‌ಗೆ ತಿಲಾಂಜಲಿ ಕೊಟ್ಟಹಾಗೆ, ಸ್ಟಾಫ್ ಕಾಲೇಜಿಗೂ ತಿಲಾಂಜಲಿ'' ಅಂತ ಅಂದುಕೊಂಡು ವಾಪಸ್ ಬಂದೆ. ಕಮಾಂಡಂಟ್‌ಗೆ ರಿಪೋರ್ಟ್ ಕೊಟ್ಟೆ. ಅವರಿಗೂ ಸಹ ಅಸಮಾಧಾನವಾಯಿತೇನೋ... ಆದರೆ ಏನೂ ಹೇಳಲಿಲ್ಲ.

1961ನೇ ಇಸವಿ ಏಪ್ರಿಲ್ ಮೊದಲನೇ ತಾರೀಖು ನಾನು ಆಫೀಸ್ ಮೆಟ್ಟಿಲು ಏರುತ್ತಿದ್ದಂತೆಯೇ ನಮ್ಮ ಎಲೆಕ್ಟ್ರಾನಿಕ್ಸ್ ಡಿಪಾರ್ಟ್‌ಮೆಂಟಿನ ಮುಖ್ಯಸ್ಥರಾಗಿದ್ದ ಲೆಫ್ಟಿನೆಂಟ್ ಕರ್ನಲ್ ರಘುನಾಥ್ ಎದುರಿಗೆ ಸಿಕ್ಕಿದರು..... ''ಹೇ ನಾಗ್, Congradulations" ಅಂದರು ''ಏಕೆ'' ಅಂದೆ. ''ಸ್ಟಾಫ್ ಕಾಲೇಜಿಗೆ Competitive Vacancy ಗಿಟ್ಟಿಸಿದ್ದೀಯ ಅಂದರು. ಆಶ್ಚರ್ಯವಾಯಿತು. ಹಾಗೂ ಅವತ್ತಿನ ತಾರೀಖು ಸಹ ಜ್ಞಾಪಕಕ್ಕೆ ಬಂತು. ''ತಮಾಷಿ ಮಾಡಬೇಡಿ.... ಇವತ್ತು ಏಪ್ರಿಲ್ ಫಸ್ಟ್ ಅಂತ ನನಗೂ ಗೊತ್ತು'' ಎಂದು ನಕ್ಕೆ. ''ಅರೆ, ಇದು ತಮಾಷಿ ಅಲ್ಲ... ನಿಜ...


ಡೆಲ್ಲಿ ಪೇಪರುಗಳಲ್ಲಿ result ಬಂದಿದೆ'' ಅಂದರು! ನಾನು ನಂಬಲಿಲ್ಲ. ''ನಂಬಿದರೆ ನಂಬು, ಬಿಟ್ಟರೆ ಬಿಡು'' ಅಂದು ಹೊರಟರು! ಕಮಾಂಡಾಂಟ್ ಕರೆದರು ''Congradulations ನಾಗ್'' ಅಂದರು! ಎದ್ದು ಕೈ ಕುಲುಕಿದರು ''ನೀವು ಹೇಳುತ್ತಿದ್ದೀರಿ ಅಂತ ನಂಬಬೇಕಾಗಿದೆ ಸರ್ ಆದರೆ ಇವತ್ತು ಏಪ್ರಿಲ್ ಫಸ್ಟ್'' ಅಂದೆ! ''ಇಲ್ಲ, ಇಲ್ಲ, ಇದು ನಿಜ ನೋಡು Statesman ಪೇಪರ್ ಇಲ್ಲಿದೆ. ನೀನಲ್ಲದೆ ಇನ್ನೂ ಇಬ್ಬರು EME ಆಫೀಸರ್‌ಗಳಿಗೂ Competitive Vacancy ಸಿಕ್ಕಿದೆ'' ಅಂದರು. ಪೇಪರ್ ನೋಡಿದೆ... ಹಿಗ್ಗಿದೆ.

ಇದಕ್ಕೆ ಅ ಅಲ್ಲವೆ ''ವಿಧಿ ವಿಲಾಸ'' ಅಂತಲೋ ''ಅದೃಷ್ಟ'' ಅಂತಲೋ ಹೇಳುವುದು!?

ಅಪಘಾತ ಸಪ್ತಾಹ

- ಹೆಚ್.ವಿ. ವೆಂಕಟಸುಬ್ಬಯ್ಯ

ನೋಡ್ರೆಪಾ ಹೇಳ್ತೀನs ಕೇಳ್ರಿ, ಖರೇ ಇಷ್ಟನಕ
ನಿನ್ನೀ ಮೊನ್ನೇನಾಗs ನಡದ ವ್ಯಾಪಕ
ಸಂಚಾರೀ ಸುರಕ್ಷತಾ ಸಪ್ತಾಹ ಯಾತಕs
ಅಂದ್ರs... ಎಲ್ಲೆಲ್ಲೂ ಹಸಿಯಾಗಿರಲೀಂತ
ಸಾವು ನೋವು ಮತ್ತs ಅಪಘಾತಗಳ ಜ್ಞಾಪಕ



“ನಿನ್ನ ಕೈನಲ್ಲಿ ಒಬ್ಬ ಇಟಾಲಿಯನ್ ರಾಣಿಯಿಂದ ಆಳಿಸ್ಕೊಳ್ಳೋ
ಯೋಗ ಇದ್ದ ಹಾಗಿದೆಯಲ್ಲಾ”

ಬಿ. ಟಿ. ಎಸ್. ರೊಮಾನ್ಸ್

-ಎಸ್.ಎಸ್. ಶಿವಸ್ವಾಮಿ

ಬಿ.ಟಿ.ಎಸ್. ಬಸ್ಸಿನಲಿ
ಗೋವಿಂದನೇ ರಾಜ.
ಚಾಲಕನ ಉದ್ಯೋಗ,
ನಿತ್ಯ ಹಗಲಿನ ಡ್ಯೂಟಿ,
ಬೆಳಗಾಗ ಹೊರಟರೆ
ಎಂಟು ಗಂಟೆಯ ಕಾಲ.
ಮಧ್ಯಾಹ್ನದೂಟಕ್ಕೆ
ಸಾಕಷ್ಟು ಬಿಡುವು.
ಟ್ರಿಪ್ಪು ಟ್ರಿಪ್ಪಿಗು ನಡುವೆ
ಕಾಫಿ ತಿಂಡಿಗೆ ಬ್ರೇಕು.
ಸ್ನೇಹಿತರು, ಹರಟೆ,
ಎಲೆಯಡಿಕೆ ಜರ್ದಾ,
ನಿಮಿಷನಿಮಿಷಕು ಜೋಕು
ಗೋವಿಂದನಿಗೆ ಬೇಕು.
ಗೋವಿಂದನಿದ್ದಲ್ಲಿ ಗೋಪಿಕಾ ಬೇಡವೆ!
ಬಹುಮಹಡಿ ಆಫೀಸಿನಿಂದಿಳಿದು ಜಿಗಿಯುತ್ತ
ಓಡಿಬರುವಳು ಚೆಲುವೆ ಬಸ್ಸಿಗಾಗಿ.
ಹೆಸರು ಪದ್ಮಾವತಿ.
ಕೈಲಿದ್ದ ಚೀಲದಲಿ
ಸ್ಯಾಂಡ್ವಿಚ್ಚು, ಫ್ಲಾಸ್ಕು.
ಮೂರು ಸ್ಟಾಪುಗಳಾಚೆ
ಇಂಗ್ಲೀಷು ಸ್ಕೂಲಿನಲಿ
ಕಾದಿರುವ ತಮ್ಮನಿಗೆ ತಿಂಡಿ ತೀರ್ಥ.
ಚಕ್ರಧರ ಗೋವಿಂದ
ಮಂದಹಾಸವ ಬೀರಿ
ಸ್ವಾಗತಿಸುತಿದ್ದರೆ,
ಒಳಗೆ ಸೀಟಿದ್ದರೂ

ದೈವರಿನ ಪೀಠಕ್ಕೆ ಒರಗಿಯೇ ನಿಲ್ಲುವಳು
ಚದುರೆ ಪದ್ಮಾವತಿ.
ಕಿಲಕಿಲನೆ ನಗುನಗುತ
ಆಫೀಸು ಗುಟ್ಟೆಲ್ಲ ಉಸುರುತಿರೆ ಲಲನೆ,
ಗೋವಿಂದ ತಲೆದೂಗಿ
'ಪೋಂ ಪೋಂ' ಮಾಡುತಲಿ
ಮೆಚ್ಚುಗೆಯ ಸೂಸುವನು.
ಆಗಾಗ ಗೋವಿಂದ ಚಾಕೊಲೇಟ್ ನೀಡುವನು.
ಇಬ್ಬರೂ ಮೆಲ್ಲುತ್ತ ಚಕ್ಕಂದವಾಡುವರು.

★★★

ಒಂದುದಿನ ಹೇಳಿದಳು ಪದ್ಮಾವತಿ,
''ನಾಳೆಯಿಂದಲಿ ನಾನು ಒಂದುವಾರದತನಕ
ಊರಿನಲ್ಲಿರೆನು.
ತಿಂಡಿ ಚೀಲವ ನನ್ನ
ಸ್ನೇಹಿತೆ, ಭಾನುಮತಿ
ಒಯ್ಯುವಳು ಸ್ಕೂಲಿಗೆ.''
''ಭಾನುಮತಿ, ಚಾರುಮತಿ,
ಯಾರಾದರೂ ಬರಲಿ'' ಆ ರಸಿಕನೆಂದ,
''ಬಿಳಿ ಚೀಲದಿಂದಲೇ ಗುರುತಿಸುವೆ ಆಕೆಯನು.
ಹಿಂದೆ ನಿಲ್ಲಲು ಜಾಗ ಆಕೆಗೇ ಮೀಸಲು.''
ಮಾರನೆಯ ದಿನವಂತು
ಗೋವಿಂದ ಖುಷಿಯಾಗಿ
ಇಸ್ತ್ರಿ ಮಾಡಿದ ಯೂನಿಫಾರಮ್ಮು ಧರಿಸಿ
ಇನ್ನಷ್ಟು ಜರ್ಬಾಗಿ ಬಂದಿದ್ದ ಡ್ಯೂಟಿಗೆ.
ಬಿಳಿಚೀಲ ಕೈಯಲ್ಲಿ ಹಿಡಿದು ತೂಗಿಸಿಬಂದ
ಭಾನುಮತಿ ಬಸ್ಸೇರಿ ಹಿಂದೆ ನಿಲ್ಲುತ್ತಲೇ
ಹಲ್ಗಿರಿದು ಬಸ್ಸನ್ನು ಹೊರಡಿಸಿದ, ಭೂಪ.
ಭಾನುಮತಿಯಾದರೋ, ಮಾತು, ಮಾತೇ ಮಾತು.
ತಡೆಯೆ ಕಾಣದ ಅವಳ
ಬಾಯಿಂದ ಸುರಿದದ್ದು
ಆಫೀಸು, ಮನೆ, ಬೀದಿ,

ಎಲ್ಲದರ ಸುದ್ದಿ.
ಮೂರು ಸ್ಟಾಪಿನ ಬಳಿಕ
ಅವಳು ಟಾಟಾ ಹೇಳಿ ಬಸ್ಸಿನಿಂದಿಳಿದಾಗ
ಗೋವಿಂದ ಸುಸ್ತು.
ಎಡೆಬಿಡದ ಬುಡುಬುಡಿಕೆಗಲ್ಲ - ಮತ್ತೆ?
ಭಾನುಮತಿ ಮಾತುಗಳ ಜತೆಜತೆಗೆ ಹೊರಬಿದ್ದ
ಈರುಳ್ಳಿ ಹಸಿಯುಸಿರು, ದುರ್ವಾಸನೆ!
ಇನ್ನೊಂದು ದಿನ ಆಕೆ ಬಸ್ಸಿನಿಂದಿಳಿಯುತಿರೆ
ಗೋವಿಂದ ಜೇಬಿನಲಿ ಕೈಹಾಕಿ ತೆಗೆದ,
ಭಾನುಮತಿಗೆಂತಲೇ ತಂದಿದ್ದ ಬಹುಮಾನ.
ಗೆಳತಿ ಹೇಳಿದ್ದಳು, ಚಾಕೊಲೇಟಿನ ವಿಷಯ!
ಕುತೂಹಲ ಉಕ್ಕುತಿರೆ,
ಭಾನುಮತಿ ಸ್ಕೂಲು ಬಾಗಿಲ ಎದುರೆ ಬಿಚ್ಚಿದಳು
ಅವಸರದಿ ಪೊಟ್ಟಣ.
ಒಳಗಿದ್ದುದೇನು?
ಗೋವಿಂದ ತನಗಾಗಿ ಏನು ತಂದಿದ್ದ?
ಚಾಕೊಲೇಟೇ? ಮೈಸೂರುಪಾಕೆ?
ಯಾವುದೂ ಅಲ್ಲ.
ಕಾದಿದ್ದ ಕೈಗಳಿಗೆ ಗೋವಿಂದ ಕೊಟ್ಟಿದ್ದ,
ಟೂತ್‌ಪೇಸ್ಟು ಬ್ರಷ್ಷು ಸೆಟ್ಟು!

''ನೀವು ಏನೇ ಹೇಳೀಮ್ಮ, ಮಕ್ಕಳ ತಾಯೀಗೆ ಗೊತ್ತಾಗೋ ಕಷ್ಟ ಬ್ರಹ್ಮಚಾರಿಗೆ ತಿಳಿಯುತ್ತೇ''





‘‘ಹಾಗೇ ಮಾತಾಡಿಸ್ತಾ ಇರು. ನಾನು ಮೆಲ್ಲಗೆ
ಎರಡು ಈರುಳ್ಳಿ ಜೇಬಿಗೆ ಬಿಡ್ತೇನೆ’’

ನಾ ಕಂಡ 'ಕೇಫ'

- ಲೀಲಾಶೇಖರ್


ಮದರಾಸಿನಲ್ಲಿ ನಮ್ಮ ಆತ್ಮೀಯ ಹಾಗೂ ಪ್ರಿಯ ವ್ಯಕ್ತಿ 'ಕೇಫ' ತುಂಬಾ ವಿಶ್ವಾಸಿ, ಸ್ನೇಹಮಯಿ. ಅಷ್ಟು ವಯಸ್ಸಾಗಿದ್ದರೂ ಎಳೇ ಹುಡುಗನ ಚಟುವಟಿಕೆ. ಅದೂ ಕನ್ನಡದ ಕೆಲಸ ಅಂದ್ರೆ ಮೊದಲು ಹಾಜರು. ನಾಟಕವಾಡಬೇಕೆಂದಾಗ ಯಾವ ಪಾತ್ರ ಕೊಟ್ಟರೂ ತುಂಬಾ ಆಸಕ್ತಿಯಿಂದ ಮೊದಲು ರಿಹರ್ಸಲ್‌ಗೆ ಬರ್ತಿದ್ದವರು ಡಾಕ್ಟರು. ನಾವೆಲ್ಲ ಸೇರಿ 'ಬಂಡ್ವಾಳವಿಲ್ಲದ ಬಡಾಯಿ' ಕೈಲಾಸಂ ರವರ ನಾಟಕನ್ನ ಆಡಿದ್ದೆವು. ಕೈಲಾಸಂ ರವರ ನಾಟಕ ಅಂದ್ರೆ ಕೆಲವರಿಗೆ ನಾಲಿಗೆ ಹೊರಳುತ್ತಿರಲಿಲ್ಲ. ತಾವೇ ತಿದ್ದಿ, ಅಭಿನಯಿಸಿ ತೋರಿಸಿಕೊಡುತ್ತಿದ್ದರು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಅಂತಾರಲ್ಲ ಹಾಗೆ ವಾಮನ ಮೂರ್ತಿ ತರಹ ಸ್ವಲ್ಪ ಕುಳ್ಳಗಿದ್ದ ಡಾಕ್ಟರು ತಮ್ಮ ವ್ಯಕ್ತಿತ್ವದಿಂದ ನಮ್ಮೆಲ್ಲರ ಹೃದಯವನ್ನು ಗೆದ್ದಿದ್ದರು. ರೇಡಿಯೋ ನಾಟಕಗಳಲ್ಲಿ, ಟಿ.ವಿ. ನಾಟಕಗಳಲ್ಲಿ ಪಾತ್ರ ಮಾಡ್ತಿದ್ದ ಅವರು ನಮ್ಮಂಥಹ ಕಿರಿಯ ಸಾಹಿತಿಗಳು ಬರೆದ ನಾಟಕವಾದರೂ ಸಹ, ನಾವು ಹೇಳಿದಂತೆ 'ಹೀಗೆ ಮಾಡಲಮ್ಮಾ' ಅಂತ ಕೇಳೋರು. ಯಾರಿಗಾದರೂ ಹುಶಾರಿಲ್ಲ ಅಂದ್ರೆ, ನಾಳೆ ಬೆಳಗ್ಗೆಯೇ ಅವರ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದುದಲ್ಲದೆ ಬಾಕಿ ಸ್ನೇಹಿತರ ಬಳಿ ಹೋಗಿ 'ಪಾಪ ಅವರಿಗೆ ಮೈ ಸರಿಯಿಲ್ಲ ಹೋಗಿ ನೋಡಿ' ಅಂತ ಹೇಳ್ತಿದ್ದರು. ನನಗೆ ಕಣ್ಣು ಆಪರೇಷನ್ ಆದ ಹೊಸದು. ಲೆನ್ಸ್ ಹಾಕಿದ್ದರು - ಮಕ್ಕಳ ಕಾರ್ಯಕ್ರಮ ನಡೆಸಿಕೊಡ್ತಿದ್ದೆ ಹುಮ್ಮಸ್ಸಿನಲ್ಲಿ ಮಕ್ಕಳೊಡನೆ ನಾನು ಜೋರಾಗಿ ಓಡುತ್ತಿದ್ದೆ - ಎಲ್ಲೋ ಕುಳಿತಿದ್ದವರು ಓಡಿ ಬಂದು ''ಕರೀರಿ ಅವಳನ್ನ... ಮೊನ್ನೆ ತಾನೇ ಕಣ್ಣು ಆಪರೇಷನ್ ಆಗಿದೆ - ರನ್ನಿಂಗ್ ರೇಸ್‌ಗೆ ಓಡುತ್ತಾ ಇದ್ದಹಾಗೆ ಓಡ್ತಿದ್ದಾಳೆ - ಏನಾದ್ರೂ ಆದ್ರೆ ಏನ್ಗತಿ'' ಅಂತ ಕಿರುಚಿದರು ಸಿಟ್ಟಿನಿಂದ ''ನಿಂಗೇನಾದ್ರೂ ಬಿದ್ದಿ - ಗಿದ್ದಿ ಇದೆಯಾ ಓಡಿದ್ದು ಸಾಕು'' ಅಂತ ಬೈದರು - ನಂತೆ ಮರೆತೇ ಹೋಗಿತ್ತು ಡಾಕ್ಟರೇ ಕಣ್ಣು ಆಪರೇಷನ್ ಆಗಿರೋದು ಅಂದೆ ಅನ್ನಿ .... ನನಗಿಂತ ಅವರಿಗೆ ಕಾಳಜಿ ಜಾಸ್ತಿ. ಮತ್ತೊಮ್ಮೆ ಸಂಘದ ಕಮಿಟಿ ಮೀಟಿಂಗ್‌ನಲ್ಲಿ ಊಟಕ್ಕೆ ಹುರಳೀಸಾರು ಮಾಡಿದ್ದೆ. ಅರವತ್ತು ಜನರ ಊಟ ಮಾಡಿದ್ದರೂ ಇನ್ನೂ ಮಿಕ್ಕಿಹೋಗಿತ್ತು. ಎಲ್ಲರೂ ರಾತ್ರೆ ಮಾಡಿದ್ದು ತಾನೇ ಬೆಳಿಗ್ಗೆಗೆ ಚೆನ್ನಾಗಿರುತ್ತೆ ಅಂತ ತೆಗೆದುಕೊಂಡು ಹೋದರು - ಡಾಕ್ಟರು ಹತ್ತಿರ ಬಂದು ''ಲೀಲಾ.... ನಂಗೂ ಕೊಡು... ನಂಗೆ ತುಂಬಾ ಇಷ್ಟ' ಅಂತ ಕೇಳಿದ್ರು.... ಎಲ್ಲಾ ಪಾತ್ರೆಗಳು ಒಬ್ಬೊಬ್ಬರು ತಗೊಂಡು ಹೋಗಿ ಬಿಟ್ಟಿದ್ದರು. ನೀರಿನ ಜಗ್‌ನಲ್ಲಿ ಹಾಕಿಕೊಂಡು ಹೋಗಿ ಎರಡನೇ ದಿನ ತಿಂದು ಮತ್ತೆ ಮಾರನೇ ದಿನ ಒಳ್ಳೆ ಸಿಹಿ ಪೊಂಗಲು ಮಾಡಿಸಿ (ತುಪ್ಪ ಸುರೀತಿತ್ತು) ಅದರ ತುಂಬಾ ತಂದು ಕೊಟ್ಟರು.

'ಇನ್ಮೇಲೆ ಮುರಳಿ ಸಾರು ಮಾಡಿದ್ರೆ ನನ್ನ ಮರೀಬೇಡ' ಅಂತ ಹೇಳಿ ಹೋಗಿದ್ದರು.

1997ಲ್ಲಿ ನಮ್ಮ 'ಕನ್ನಡಿಗರ ಕೂಟ'ದ ಅಧ್ಯಕ್ಷರಾಗಿದ್ದ ಡಾಕ್ಟರು ಈ ವಯಸ್ಸಿನಲ್ಲೂ ಅತಿ ಉತ್ಸಾಹದಿಂದ ಕೆಲಸ ಮಾಡಿ ಸಂಘದ 25ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ನಡೆಸಿಕೊಟ್ಟರು. ಆಗ ಆಗ್ರಾದಲ್ಲಿದ್ದ ನಾನು ಮದರಾಸಿಗೆ ಬಂದು ಅವರ ಕೈಯಿಂದ "award" ತಗೊಂಡಿದ್ದೆ. ಒಂದು ಘಂಟೆ ಕುಳಿತು ಮಾತನಾಡಿ 'ಯಾಕೆ ಕುಂಟುತ್ತಿದ್ದೀಯಲ್ಲ... ಇರು ಮಾತ್ರೆ ಬರ್ಕೊಡ್ತೀನಿ' ಅಂತ ಬರೆದುಕೊಟ್ಟು ಅವನ್ನು ನಮ್ಮೆಜಮಾನ್ರು ಅಂಗಡಿಯಿಂದ ತರೋವರೆಗೂ ಕುಳಿತಿದ್ದು ತಂದ್ಮೇಲೆ ತಾವೇ ಒಂದು ಮಾತ್ರೆ ನುಂಗಿಸಿ ಹೋಗಿದ್ದರು. ಅದೇ ಕಡೆ ಜೂನ್ 1997. ನಾನು ಅವರನ್ನು ನೋಡಿದ್ದು. ಅವರ ಆ ಮಾತುಗಳು, ನಗುಮುಖ ಇನ್ನೂ ನನ್ನ ಕಣ್ಮುಂದೆ ಸುಳಿಯುತ್ತಲೇ ಇದೆ. ಅವರ ಒಂದು ಪುಸ್ತಕವನ್ನು ಪ್ರಕಟಿಸುವ ಮುನ್ನ ತಂದುಕೊಟ್ಟು "ಓದಿ ಎಲ್ಲಾದರೂ ತಪ್ಪಿದ್ದರೆ ಹೇಳು" ಅಂದರು "ಡಾಕ್ಟರೇ ನಿಮ್ಮ ಪುಸ್ತಕಾನ ನಾನು ಓದಿ ತಪ್ಪಿದ್ದರೆ ಹೇಳಬೇಕೆ... ನಾನು ಯಾವ ಮಹಾ ದೊಡ್ಡ ಲೇಖಕಿ" ಅಂದಾಗ ಹಾಗಲ್ಲಮ್ಮ... ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡೋರು, ಚಿಕ್ಕೋರು ಅನ್ನೋ ಭೇದವಿರಬಾರದು. ಹಸ್ತ ಪ್ರತೀಲಿ ಏನಾದ್ರೂ ತಪ್ಪಿರಬಹುದು. ನನಗೆ ಹೊಳೆಯದೆ ಇರೋದು ನಿನಗೆ ಹೊಳೀಬಹುದು ಅಂದಾಗ ನಿಜವಾಗಿಯೂ ಇವರೆಂಥ ದೊಡ್ಡ ವ್ಯಕ್ತಿ ಎಂದುಕೊಂಡೆ.

ಇಂದು ಕೇಫ ಅವರಿಲ್ಲ. ಆದರೂ ಅವರು ಹೇಳ್ತಿದ್ದರು ರಾ.ಶಿ. ಹೇಳ್ತಿದ್ದರಂತೆ 'ಕೊರವಂಜಿ ಹುಟ್ಟಿದ್ದೇ 'ಪಂಚ' ಸ್ಫೂರ್ತಿಯಿಂದ, ನೀನು ವೋಡ್ ಹೌಸಿಯನ್ ಹ್ಯೂಮರ್ ಕನ್ನಡದಲ್ಲಿ ತರೋದಿದ್ರೆ 'ಕೊರವಂಜಿ' ನಾಲ್ಕು ಪುಟ ಪ್ರತಿ ತಿಂಗಳು ನಿನಗೆ ಮೀಸಲು' ಅಂತ. ಹಾಗೆ ವೋಡ್ ಹೌಸರ ಜೀವ್ಸ್, ಬರ್ಟಿವೋಸ್ಟರ್, ಡ್ರೋನ್ಸ್ ಕ್ಲಬ್-ಕ್ರಮವಾಗಿ ಶೌರಿ-ಪಾಂಡು ಮೈಗಳ್ಳರ ಸಂಘಗಳಾದವು - ಅವರ ಸಾಹಿತ್ಯ ಅಮರ.

"ನಾಲ್ಕು ಲೆಗ್ ಬೈ ಆದ್ರೆ
ಏನಂತೆ? ಹದಿನಾರು ರನ್
ಮಾಡಿದ್ನಲ್ಲಾ"



ಮುಂದಿನ ಹಾಸ್ಯೋತ್ಸವಗಳು - ಸಲಹೆಗಳು

- ಎಂ.ಎನ್.ಕೆ.

ನಾನು ಹೆಚ್.ಎನ್. ಕಲಾಕ್ಷೇತ್ರದ ದಾರಿಯಲ್ಲಿ ಬರುವಾಗ ಒಂದು ಯುವ ಯುವತಿಯರ ಗುಂಪು ದಾಪುಗಾಲು ಹಾಕುತ್ತ ಹೋಗುತ್ತಿತ್ತು. ಅವರೆಲ್ಲಾ ಓಡುವುದು ನೋಡಿದರೆ ಆದಷ್ಟು ಬೇಗ ಸಭಾಂಗಣ ಸೇರಿ ಅಲ್ಲಿನ ಯಾವ ಜೋಕ್ಸೂ ಮಿಸ್ ಮಾಡಬಾರದೆಂಬ ಅವಸರ ಇದ್ದಂತಿತ್ತು. ಅವರ ಹಿಂದೆ ನಾನೂ ಓಡಿ ಬಂದರೆ ಎಲ್ಲಾ ಸೀಟ್ ಭರ್ತಿ. ಸಾಸಿವೆ ಕಾಳಿಗೂ ಜಾಗವಿಲ್ಲ. aisles ಎಲ್ಲಾ ಭರ್ತಿ. ಇಡೀ ಸಂಸಾರಗಳೇ ಅಲ್ಲಿ ಕೂತಿದ್ದಾರೆ. ಮಕ್ಕಳೂ ಮರಿ ಸಮೇತ.

ಅಲ್ಲಿ ಇಲ್ಲೀ ಓಡಾಡಿ ಮೈ ಭಾರವನ್ನು ಒಂದು ಕಾಲಿಂದ ಇನ್ನೊಂದು ಕಾಲಿಗೆ ವರ್ಗಾಯಿಸುತ್ತ NSS ದಂಪತಿಗಳನ್ನು ಕಂಡು ಅವರು ಸ್ವಲ್ಪ adjust ಮಾಡಿಕೊಂಡು ಕೊಟ್ಟ ಜಾಗದಲ್ಲಿ ಒಂದು ಕುರ್ಚಿ ಹಾಕಿ ಉಸ್ಸಪ್ಪಾಂತ ಕೂತೆ. ಕೂತು ಹಾಗೇ ಮುಂದಿನ ಹಾಸ್ಯೋತ್ಸವಗಳು ಹೇಗಿರಬೇಕೆಂದು ಯೋಚಿಸಿದೆ.

1. ಮುಂದಿನವು ಹಾಸ್ಯೋತ್ಸವಗಳಲ್ಲ - ಹಾಸ್ಯ ಪರಿಷೆಗಳು. ಅಷ್ಟು ಜನ ತುಂಬಿರುತ್ತಾರೆ. ಕನ್ನಡಿಗರ ಹಾಸ್ಯ ದಾಹ ಅಷ್ಟಿದೆ.

2. ಈ ಪರಿಷೆಯನ್ನು ಬೆಂಗಳೂರು ಅರಮನೆ ಆವರಣದಲ್ಲಿ ಮಾಡಬೇಕಾದೀತು. ದೊಡ್ಡ ಶಾಮಿಯಾನ ಹಾಕಿ ಮೈಕ್ ಟೀವೀ ಅಳವಡಿಸಿ ಬಂದ ಸಂಸಾರಗಳಿಗೆ ನಿಮ್ಮ ಜಮಖಾನ ನೀವೇ ತನ್ನಿ ಎಂದು ಹೇಳಬಹುದು. ಸಂಸಾರಗಳು ಪಿಕ್‌ನಿಕ್‌ಗೆ ಬೇಕಾದ ಸಾಮಾನೆಲ್ಲಾ ತಂದು ಪಿಕ್‌ನಿಕ್ ಜೊತೆಗೆ ಕಾರ್ಯಕಲಾಪ ನೋಡಬಹುದು ಇಡೀ ದಿನ.

3. ಅಲ್ಲಲ್ಲಿ ಕಾಫಿ ಟೀ ಸ್ಟಾಲ್‌ಗಳಿದ್ದರೆ ಉತ್ತಮ. ಕೆಲವು ಸಲ ಸ್ಟ್ರಾಂಗ್ ಕಾಫಿ ಬೇಕಾಗಬಹುದು.

4. ಮುಂಜಾಗ್ರತೆ ಕ್ರಮದಂತೆ ಒಂದು ಪೋಲೀಸ್ ವ್ಯಾನ್ ಬೇಡವೇ. stampede ಆದರೆ ಇಲ್ಲಾ ಮಕ್ಕಳು ಮರಿ ತಪ್ಪಿಸಿಕೊಂಡರೆ ಪೋಲೀಸ್ ಬೇಕಾಗುತ್ತೆ. ಇದಾವುದೂ ಆಗದಿದ್ದರೂ ನಮ್ಮ ಪೊಲೀಸ್‌ನೋರಿಗೂ ಸ್ವಲ್ಪ ಹಾಸ್ಯ ಸೋಂಕಲಿ.

5. ಒಂದು ambulance ಅಂತೂ ಬೇಕೇಬೇಕು. ಯಾಕಂತೀರಾ, ತುಂಬಾ ನಕ್ಕು ನಕ್ಕು ಉಸಿರು ಸಿಕ್ಕಿಕೊಂಡರೆ first aid ಬೇಡವೇ?

6. ಈ ಸಾರಿಯೇನೋ ರಿಯಾಯಿತಿ ಗಡಿಯಾರ ಸಿಕ್ತು. ಮುಂದಿನ ಸಲದಿಂದ ಸೀರೆ. ಬಟ್ಟೆ ಬರೆ ಸ್ಟೀಲ್ ಪಾತ್ರೆ ಇನ್ನೇನು ಸಿಕ್ಕುತ್ತೋ? ನೋಡೋಣ, ನೋಡೋಣ.

7. international conferences ನಲ್ಲಿ ಮಾಡೋಹಾಗೆ cuncurent sessions ಯಾಕೆ ಮಾಡಕೂಡದು? ಹೆದರಬೇಡಿ, ಎಲ್ಲಾ sessions ಗೂ ಧಂಡಿಯಾಗಿ ಜನ ಇರ್ತಾರೆ.

ಸಧ್ಯಕ್ಕೆ ಒಂದು great relief. ಇಷ್ಟೊಂದು ಜನ ಫ್ರೀ ಆಗಿ ಸಿಗೋದ್ನೋಡಿ ಯಾವ ರಾಜಕಾರಣೀನೂ ಬಂದು ಭಾಷಣ ಮಾಡಲಿಲ್ವಲ್ಲ. ದೇವರ ದಯ.

ಆಪಾಟೀ ಜನ ನೋಡ್ತಾ ನೋಡ್ತಾ ನಂಗನ್ನಿಸ್ತು, ಎಲಾ ಇದರಲ್ಲಿ ನಮ್ಮ ಅಪರಂಜಿ ಚಂದಾದಾರರೆಷ್ಟೊಂತ. ನನ್ನ guess ನಿಮ್ಮ guess ಯೇ.

ಒಟ್ಟಾರೆ ಹೇಳೋದಾದ್ರೆ, A big do. damn well done. thank you organisers.



"ಇದ್ರಲ್ಲಿ ಬಡಿದ್ರೆ ಬಟ್ಟೆ ನಿಜವಾಗ್ಲೂ ಬೆಳ್ಳಗಾಗುತ್ತಂತೇರಿ"

‘ಅಮ್ಮಾ ಎಂದರೆ... ಕಲ್ಲೊ... ಸಕ್ಕರೆ’’

- ಚಂಚಲಾ ಶ್ರೀಕಂಠಯ್ಯ

‘‘ಅಮ್ಮಾ ಎಂದರೆ... ಕಲ್ಲೊ ಸಕ್ಕರೆ ऽऽऽऽऽऽ’’

ಫಸ್ಟ್ ಸ್ಟ್ಯಾಂಡರ್ಡ್ ಓದುತ್ತಿದ್ದ ಪೋರ ... ಓಲ್ಡ್ ಆಲ್ಬಮ್ ಧ್ವನಿ ಸುರುಳಿಯಿಂದ ಉಲಿಯುತ್ತಿದ್ದ ರಾಗಕ್ಕೆ ತನ್ನ ಧ್ವನಿಯನ್ನೂ ಕೂಡಿಸಿ ಓಲ್ಡ್ ಈಸ್ ಕೋಲ್ಡ್ ಮಾಡುತ್ತಿದ್ದ.... ಉಚ್ಚಾರಣೆಯಲ್ಲಿ ಅಪಭ್ರಂಶ ಮಾಡುತ್ತಾ!!!

‘ಅಮ್ಮಾ’ ಅನ್ನೋ ಪದ ಫಾರಿನ್ ವಸ್ತುವಿನಂತೆ!! ಅಯ್ಯೋ ಫಾರಿನ್ ಅಂದೆನೇ.., ಸ್ಸಾರಿ... ಈಗ ನಮಗೆಲ್ಲಾ ಫಾರಿನ್ ಅನ್ನೋದು ‘ಅಮ್ಮ’ನಷ್ಟೇ ಆಪ್ತವಾಗಿರೋದು ಮರೆತೇ ಹೋಯ್ತು ಹೋಗಲಿ ಬಿಡಿ... ಅದನ್ನಲ್ಲ ಹೇಳೋಕೆ ಹೊರಟದ್ದು. ಅಮ್ಮಾ ಅನ್ನೋ ಪದ ಒಮ್ಮೊಮ್ಮೆ ‘ಕಲ್ಲೊ’ ಆಗುತ್ತೆ ಉಚ್ಚಾರಣೆ ಮಾಡೋಕೆ ... ಅನ್ನೋದನ್ನ ಹೇಳೋಕೆ ಹೊರಟಿದ್ದೆ.

ಅಮೆರಿಕಾದಿಂದ ಮಗ ಪ್ರದೀಪ ಊರಿಗೆ ಬಂದು ಮದುವೆ ಮಾಡಿಕೊಂಡು, ಹುಡುಗಿಯನ್ನೂ ತನ್ನ ಖರ್ಚಿನಲ್ಲೇ ವಾಪಸ್ಸು ಕರೆದುಕೊಂಡು ಹೋಗುತ್ತಾನೆ ಅನ್ನೋ ಸುದ್ದಿ ಕಾಡ್ಗಿಚ್ಚಿನಂತೆ ಹರಡಿದ್ದೇ ತಡ, ಕೌಸಲ್ಯಮ್ಮನ ಮನೆ ಮುಂದೆ ಹೆಣ್ಣು ಹೆತ್ತವರು... ತಮ್ಮ ಹೆಣ್ಣು ಮಕ್ಕಳೊಂದಿಗೆ ‘ಕ್ಯೂ’ ನಿಂತರು ಅಮೆರಿಕೆಗೆ ದತ್ತು ಬಿಟ್ಟ ಮಗನ ಅಮ್ಮ ಕೌಸಲ್ಯಮ್ಮ ಆ ಕ್ಯೂಗಳನ್ನು ತನ್ನ ಆಪ್ತೇಷ್ಟರೊಂದಿಗೆ ಚರ್ಚಿಸಿ... ಪರೀಕ್ಷಿಸಿ... ಒಂದು ಪುಟ್ಟ ಪಟ್ಟಿಯನ್ನು ತಯಾರಿಸಿದ್ರು. ಪ್ರದೀಪ್ ಇರೋ ಒಂದು ತಿಂಗಳ ರಜೆಯಲ್ಲಿ ‘ಕ್ಯೂ’ ನೆಲ್ಲಾ ಕರಗಿಸಲಾಗುವುದಿಲ್ಲಾಂತ ಹೆಣ್ಣು ಹೆತ್ತವರಿಗೊಂದು ದೊಡ್ಡ ಉಪಕಾರ ಮಾಡಿದ್ರು. ಈ ಪುಟ್ಟ ಪಟ್ಟಿಯಿಂದ ಒಬ್ಬ ಅದೃಷ್ಟವಂತ ಹುಡುಗಿ (ಹಾಗೆಂದೇ... ಎಲ್ಲರೂ ಕರೆದರು... ಮುಂದೆ ಭೂ ವೈಕುಂಟ ದರ್ಶನ ಪಡೆಯಲಿರೋದ್ದರಿಂದ) ಕೌಸಲ್ಯಮ್ಮನ ಮತ್ತು ಅವರ ಕುಟುಂಬ ಸದಸ್ಯರ ಮನವನ್ನ ತನ್ನ ಮುದ್ದು ಮಾತಿನಿಂದ... ಮುಗ್ಧ ನಡುವಳಿಕೆಯಿಂದ ಗೆದ್ದೇ ಬಿಟ್ಟಳು. ಪ್ರದೀಪನ ಒಪ್ಪಿಗೆ ಕಾಯ್ದಿರಿಸಲಾಗಿದ್ದರೂ.. ಕೌಸಲ್ಯಮ್ಮ ತಮ್ಮ ಭಾವೀ ಬೀಗರಿಗೆ ‘‘ತಮಗೆಲ್ಲಾ 99% ಒಪ್ಪಿಗೆಯಾಗಿದೆ’’... ಎನ್ನುವ ಶುಭ ಸಮಾಚಾರವನ್ನ ತಿಳಿಸಿ ಅವರ ಬಾಯಿ ಮನಸ್ಸು ಸಿಹಿಮಾಡಿದ್ರು. ಚೆನ್ನಾಗಿ ಕಲಿತವಳಾಗಿದ್ದು, ಆಧುನಿಕ ಮನೋಭಾವ ಹೊಂದಿದ್ದ ಹುಡುಗಿ ಕೌಸಲ್ಯಮ್ಮನ ಮನೆಗೆ ಬಂದು ಹೋಗಲು ಶುರು ಮಾಡಿದಳು. ಕೌಶಲ್ಯಮ್ಮ ಅವಳಿಗೆ ‘‘ಆಂಟಿ’’ನೂ ಆದಳು. ಕುಟುಂಬದವರು ವಿಶಾಲಮನೋಭಾವ ಹೊಂದಿದವರಾದ್ದರಿಂದ ಯಾರೂ ಚಕಾರ ಎತ್ತಲಿಲ್ಲ. ಹುಡುಗಿ ‘‘ಆಂಟೀ... ಆಂಟೀ’’ ಜಪದೊಂದಿಗೆ ಭಾವೀ ಅತ್ತೆ ಸುತ್ತಾ ಪ್ರದಕ್ಷಣಾ ನಮಸ್ಕಾರವನ್ನ ವಾರಕ್ಕೆ ಒಂದೋ ಎರಡೋ ದಿನ ಮನೆಗೆ ಬಂದು ಹಾಕೋದನ್ನ

ಮಾತ್ರಾ ತಪ್ಪಿಸ್ತಾ ಇರಲಿಲ್ಲ.

ಆದರೇನೂ...

ಹುಡುಗಿ ಬರೋದು ಮನೆಗೆ ಹೆಚ್ಚಾದಷ್ಟೂ....

ಪ್ರದೀಪ 'ತನ್ನ ಇಂಡಿಯಾ ಟ್ರಿಪ್ಪನ್ನು ಮುಂದೆ ಹಾಕ್ತಾನೇ ಬಂದ.' ವರ್ಷ ದಾಳದಂತೆ ಉರುಳಿತು. ಹುಡುಗಿ-ಆಂಟೀ ಬಾಂಧವ್ಯ ಗಟ್ಟಿಯಾಕ್ತಾನೆ ಇತ್ತು.


ಹುಡುಗಿ ತಪಸ್ಸಿಗೆ ಮೆಚ್ಚಿ ವರ ಕೊಡುವಂತೆ ವರ ಮಹಾಶಯ ಒಂದು ಬೆಳಿಗ್ಗೆ ಇಂಡಿಯಾಕ್ಕೆ ಬಂದೇ ಬಿಟ್ಟ. ತಾಯಿ ಒಪ್ಪಿ ಮೆಚ್ಚಿದ್ದ ಹುಡುಗಿಯನ್ನು ತಾನೂ ಮೆಚ್ಚಿ... ಒಂದೇ ವಾರದಲ್ಲೆ ಎರಡೆರಡು ಸಲ ಮದುವೆಯನ್ನ ಮಾಡಿಕೊಂಡೇಬಿಟ್ಟ. ಹೆದರ್‌ಬೇಡಿ..... ಎರಡು ಸಲ ಮದುವೆ ಅಂತ ಒಮ್ಮೆ ಶಾಸ್ತ್ರೋಕ್ತವಾಗಿ ಬಂಧು-ಬಾಂಧವರ 'ಸಮ್ಮುಖ'ದಲ್ಲಿ ತಾಳಿ ಬಿಗಿದು ಹುಡುಗಿಯನ್ನ ತನ್ನ ಧರ್ಮಪತ್ನಿಯಾಗಿ ಸ್ವೀಕರಿಸಿದ. ಮಾರನೆ ದಿನ ಸದ್ದುಗದ್ದಲ ಮಾಡದೆ ಇಬ್ಬರೇ ಹೋಗಿ ರಿಜಿಸ್ಟರ್ ವಿವಾಹ ಮಾಡಿಕೊಂಡು ತಾವು ಕಾನೂನು ರೀತ್ಯಾ ಸತಿ-ಪತಿಗಳು ಎಂದು ಘೋಷಿಸಿಕೊಂಡ್ರು... ಮುಂದೆ 'ಮೀನಾ'ಗೆ ತಕರಾರು ಬರದಿರಲೀಂತ.

ಮೆಟ್ಟಕ್ಕಿ ತುಳಿದು ಅತ್ತೆ ಮನೆ ''ಗೃಹಪ್ರವೇಶ''ವನ್ನು ಅಧಿಕೃತವಾಗಿ ಮಾಡಿ ಬಂದ ಮೇಲೆ ಹುಡುಗಿಗೆ ಪೀಕಲಾಟ ಶುರುವಾಯ್ತು. ಇಷ್ಟು ಸಮಯವೂ ಆಂಟೀಯಾಗಿದ್ದವರು ಈಗ ಅತ್ತೆ ಸ್ಥಾನವನ್ನ ಅಲಂಕರಿಸಿಬಿಟ್ಟಿದ್ದಾರೆ ಕೌಸಲ್ಯಮ್ಮ. ಹೊಸ ಸೊಸೆ ಅತ್ತೆನ್ನ ಆಂಟೀ- ಆಂಟೀ ಅಂತಾನೇ ಎಲ್ಲಾ ಆಂಟೀರನ್ನ ಕರೆಯುವಂತೆ ಸಂಭೋದಿಸುತ್ತಿದ್ದಾಳೆ. ವಿಶಾಲ ಮನಸ್ಸಿನ ಕೌಸಲ್ಯಮ್ಮನಿಗೆ ಕಿರಿ-ಕಿರಿ ಯಾದ್ರೂ ಬಾಯಿಬಿಟ್ಟು ಹೇಳಲಿಲ್ಲ. ಮುದ್ದಿನ ಸೊಸೆ ಹೇಗಾದ್ರೂ ಕರೆದುಕೊಳ್ಳೀಂತ ಸುಮ್ಮನಿದ್ದುಬಿಟ್ಟರು.

ಆದರೆ ಮನೆಯವರು ಸುಮ್ಮನಿರಬೇಕಲ್ಲಾ?..... ತರಾಟೆಗೆ ತೆಗೆದುಕೊಂಡ್ರು ''ಏನಮ್ಮಾ... ನಾನು ನೋಡುತ್ತಾನೆ ಇದ್ದೇವೆ.... ಮಗನ್ನ ಕೊಟ್ಟ ಅತ್ತೇನ ಆಂಟೀ ಆಂಟೀಂತ ಕರೀತಿಯಲ್ಲಾ ಇನ್ನು ಮುಂದೆ 'ಅಮ್ಮಾ' ಅಂತ ಕರಿ...'' ಎಂದರು. ಹುಡುಗಿ ಕಕ್ಕಾಬಿಕ್ಕಿಯಾದಳು... 'ಅಮ್ಮಾ' ಅಂತ ಕರೆಯೋಕೆ ಹೋಗ್ತಾಳೆ ಉಚ್ಚಾರ ಸರಾಗವಾಗಿ ಆಗದು.... ಪಾಪ ಅಭ್ಯಾಸಬಲ ಮಮ್ಮಿ ಡ್ಯಾಡಿ ಅಂತ ಮಿಲಿದ ನಾಲಿಗೆಗೆ 'ಅಮ್ಮ' ಶಬ್ದ ಪರಕೀಯವಾಗಿ ''ಪರದೇಶಿ'' ಯಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ಹುಡುಗಿ ಮರೆತು ''ಆಂಟಿ' ಎಂದು ಅತ್ತೆಯನ್ನ ಸಂಭೋದಿಸಿದಷ್ಟೂ 'ಅಮ್ಮಾ' ಅನ್ನೋ ಪದದ ಒತ್ತಡ ಇವಳ ಮೇಲೆ ಹೆಚ್ಚಾಗ್ತಾನೆ ಬಂತು. ಕಡೆಗೆ ಬೇಸತ್ತ ಆ ಮುಗ್ಧೆ ನಾನು ಏನ್ ಮಾಡ್ಲಿ ಆಂಟೀಸ್ನ(ಗಳೇ) ಆಂಟೀನ (ಅತ್ತೆ ಕಡೆ ಕೈ ತೋರಿಸಿ) 'ಅಮ್ಮಾ' ಅಂತ ಕರೀಬೇಕೂಂತ ಒಂದು ವಾರದಿಂದಲೂ ಪ್ರಾಕ್ಟೀಸ್ ಮಾಡುತ್ತಿದ್ದೇನೆ. 'ಅಮ್ಮಾ' ಅನ್ನೋದಿಕ್ಕೆ ಬರೊಲ್ಲದು... ಮರೆತೆಹೋಗುತ್ತೆ'' ಅಂದ್ಲು. ಅಲ್ವೇ ಮತ್ತೆ ಸಹಜಾನೇ ಅಮ್ಮಾ ಅನ್ನೋದು ಸ್ವದೇಶಿಯದ್ದಲ್ಲವೇ?.... ಆದರೇನು ಮಿಕ್ಕ ಕಿಲಾಡಿ

ಆಂಟೀರಗಳು ಬಿಟ್ಟಾರೆಯೇ? ಊಹೂಂ... ಅಲ್ಲಿದ್ದವರೊಬ್ಬರು ''ಅಲ್ವೇ ಹುಡುಗಿ... ಅಮ್ಮಾ ಅನ್ನೋ ಪದ ಅಲ್ಲ್ವೇ ಮತ್ತೇ... ಅದು ಸಹಜನೇ. 'ಅಮ್ಮಾ' ಅನ್ನೋದು ಸ್ವದೇಶಿ ಪದವಾದದ್ದರಿಂದ ಮರೆವೂ ಸ್ವಾಭಾವಿಕ. ಅದು ಅಲ್ಲದೇ, ಹೆತ್ತಮ್ಮನನ್ನು 'ಅಮ್ಮಾ' ಅಂತ ಕರೆಯುವಷ್ಟು ಸುಲಭವಾಗಿ ಅತ್ತೆಯನ್ನು ಕರೆಯೋದು ಸಲೀಸಲ್ಲ. ಮನೆಯಲ್ಲಿದ್ದ ಮಿಕ್ಕ ಅವಳ 'ಆಂಟೀ'ಗಳು ಸುಮ್ಮನಿರಬೇಕಲ್ಲ.... ಊಹೂಂ.... ಬಿಡಲಿಲ್ಲ... ಪಟ್ಟು ಹಿಡಿದರು. ಆದರೆ ಅವರ ಕಾರ್ಯ ನಿಷ್ಪ್ರಯೋಜಕವಾಯ್ತು. ಬೇಸತ್ತ ಆಂಟಿಯೊಬ್ಬರು ''ಅಲ್ವೇ ಹುಡುಗಿ... ನಮ್ಮ ಮನೆಯಲ್ಲಿ ಅತ್ತೆಯನ್ನ 'ಅಮ್ಮ' ಅಂತಾನೆ ಕರೆಯೋದು. ಆ ಪದ ಹೃದಯದಿಂದ ಬರಬೇಕೇ ಹೊರತು ಮೆದುಳಿನಿಂದಲ್ಲವಮ್ಮಾ. ಸುಮ್ಮನೆ ಮೆದಳಿಗೆ ಕಸರತ್ತು ಕೊಡಬೇಡ'' ಎಂದು ಚೇಷ್ಟೆ ಮಾಡಿ, ಮಾತು ಮುಗಿಸಿದರು.

ಪಾಪ! ಅವರ ಮಾತು ಆಮುಗ್ಧೆ ನಕ್ಕ ನಗುವಿನಲ್ಲಿ ಲೀನವಾಯ್ತು. ನೀವೇ ಹೇಳೀಗ... ಅಮ್ಮಾ ಅಂದರೆ.... ಕಲ್ಲು ಹೌದು... ಸಕ್ಕರೆನು ಹೌದಲ್ಲವೇ?



''ಸಧ್ಯ, ಟಿಕೆಟ್ ಸಿಗಲಿಲ್ಲ. ಚುನಾವಣೆ ಆದ್ಮೇಲೆ ಎಲ್ಲಿಗೆ ಬೇಕಾದ್ರೂ ಹಾರಬಹುದು''

ಸಿನಿಮಾತು

- ಆನಂದ

ಅವಸರಯುಗದ ಟೈಟ್‌ಗಳು

'ಹೆಗಡೆ ಹೇಳಿದರೆ ಹಾಳು ಬಾವಿಗೆ ಹಾರಲು ಸಿದ್ಧ' ಎಂಬುದು ಅನಂತ್‌ನಾಗ್‌ರ ಹಳೆಯ ಡೈಲಾಗ್. ಆ ಟೈಟಲ್‌ನ ಚಿತ್ರ ಯಾರೂ ತಯಾರಿಸಿದಂತಿಲ್ಲ. ತಯಾರಾಗಿದ್ದಿದ್ದರೆ? ಅಷ್ಟು ಉದ್ದದ ಹೆಸರು ನೆನಪಿನಲ್ಲಿಟ್ಟುಕೊಳ್ಳಲು ಅಭಿಮಾನಿ ಪ್ರೇಕ್ಷಕರು ಹೆಣಗಾಡುತ್ತಿದ್ದರಲ್ಲವೆ? ಆಗದನ್ನು ಆಗ ಹೆಹೇಹಾಬಾಹಾಸಿ ಎಂದು ಮೊಟಕು ಮಾಡಬಹುದಿತ್ತು. ಹೀಗೆಲ್ಲ ಮಾಡಲು ಸಾಧ್ಯವೆ ಎಂದು ಬೆರಗಾಗಬೇಡಿ. ಏಕೆಂದರೆ ಆ ಪ್ರವೃತ್ತಿ ಈಗ ಹಿಂದಿ ಚಿತ್ರರಂಗದಲ್ಲಿದೆ. 'ಹಂ ಆಪ್‌ಕೆ ಹೈ ಕೌನ್' ಎಚ್‌ಎಎಚ್‌ಕೆ ಎಂದೇ ಆ ಅವಸರಯುಗದಲ್ಲಿ ಹ್ರಸ್ವಗೊಂಡಿಲ್ಲವೆ? ಕ್ವಯಾಮತ್ ಸೆಕ್ವಯಾಮತ್ ತಕ್ ಸಹ ಹಾಗೇ ಅಬ್ರಿವೇಟ್ ಆಗಿದೆ.

ಆದರೆ ಕನ್ನಡದಲ್ಲಿ? ಟೈಟಲ್ ಮೊದಲೇ ಮೊಟಕುಗೊಂಡು ನಂತರ ತೆರೆ ಕಾಣುವುದು ಹೆಚ್ಚು. ಉದ್ದವೋ ಗಿಡ್ಡವೋ ಹೆಸರಿನಲ್ಲೇನಿದೆ ಎಂದು ಹೇಳಬಹುದು. ಕೆಲವೊಮ್ಮೆ ಚಿತ್ರದ ಟೈಟಲ್ಲೇ ಎಲ್ಲವೂ ಹೇಳುತ್ತದೆ. 'ಕರುಣೆಯೇ ಕುಟುಂಬದ ಕಣ್ಣು' 'ಪ್ರೇಮರಾಗ ಹಾಡು ಗೆಳತಿ' ಅಥವಾ 'ರಾಮಾಂಜನೇಯ ಯುದ್ಧ' ಎಂದಾಗ ಬೆಳ್ಳಿತೆರೆಯ ಮೇಲೆ ಪ್ರೇಕ್ಷಕನಿಗೆ ಏನು ಕಾದಿದೆ ಎಂಬುದರ ಮುನ್ಸೂಚನೆ ಸಿಗುತ್ತದೆ. ಆದರೆ ಈಗೀಗ ಟೈಟಲ್‌ಗಳ ಬಗ್ಗೆ ಕನ್ನಡ ಮಂದಿಯ ಮನೋಭಾವನೆ ಬದಲಾಗುತ್ತಿದೆ. ಏಕೆಂದರೆ ಅತ್ತ ಚಿತ್ರದ ಬಜೆಟ್ ಏರುತ್ತಿದ್ದರೆ ಇತ್ತ ಟೈಟಲ್‌ಗಳು ಮೊಟಕಾಗುತ್ತಿವೆ. ಉದ್ದುದ್ದ ಹೆಸರುಳ್ಳ ಚಿತ್ರಗಳ ದಿನಗಳು ಮುಗಿದಾವೆ ಎಂದೂ ಅನಿಸುತ್ತಿದೆ. ಸ್ವೀಟ್ ಅಲ್ಲದಿದ್ದರೂ ಷಾರ್ಟ್ ಟೈಟಲ್‌ಗಳು, ಅಚ್ಚ ಇಂಗ್ಲಿಷ್‌ನ ಪ್ಯೂರ್ ಕನ್ನಡ ಸಿನಿಮಾಗಳು ಈಗ ತೆರೆ ಕಾಣುತ್ತಿದೆ. ಆದುದರಿಂದಲೇ ಸೆಂಟ್ರಲ್ ಜೈಲ್ (ನಲ್ಲಿ ಲಾಕ್‌ಅಪ್ ಡೆತ್ (ಆಗಿ), ಗೋಲೀಬಾರ್ (ನಂತರ) ಕರ್ಫ್ಯೂ ದಿನಗಳು ಈಗ. ಇವೂ ದೊಡ್ಡದಾಯಿತೆಂದು ಮೇಲುಸಿರು ಬಿಟ್ಟ ನಿರ್ದೇಶಕರು 'ಶ್!' ಎಂದಷ್ಟೇ ಹೇಳಿದರೆ ಪ್ರೇಕ್ಷಕನಿಗೆ ಸಾಲದೆ ಎಂದು ಕೇಳಿ ಇನ್ನೊಂದು ಟೈಟಲ್ ಕಡೆ ಗಮನ ನೀಡಲು 'ಓಂ' ಎನ್ನುತ್ತಾ ಧ್ಯಾನಾಸಕ್ತರಾಗಿದ್ದವು. ಅದರ ಫಲವೋ ಏನೋ ಈಗ 'ಏ' ಎಂದರೇ ಸಾಕು ಎಂದು ನಿರ್ಧರಿಸಿದ್ದಾರಂತೆ. ಆದರೆ 'ಏ' ಎಂದಷ್ಟೇ ಚಿತ್ರಮಂದಿರದ ಮುಂದೆ ರಾರಾಜಿಸಿದರೆ ಅಡಲ್ಟ್ಸ್ ಓನ್ಲಿ ಎಂದು ಪ್ರೇಕ್ಷಕ ವರ್ಗ ಭಾವಿಸಿದರೆ? ಆಗ ರಷ್ ಹೆಚ್ಚಾಗುವುದೇನೋ? ಉದ್ದೇಶವೂ ಅದೇ ಇರಬಹುದೆ? ಆದರೆ ಕನ್ನಡ ನಾಮಫಲಕಗಳ ಈ ದಿನಗಳಲ್ಲಿ 'ಏ' ಬದಲು 'ಅ' ಎನ್ನುವುದು ಹೆಚ್ಚು ಸೂಕ್ತವಲ್ಲವೆ? ನಂತರ ಆ, ಆ, ಇ, ಈ ದಿನಗಳೂ ಬಂದಾವು.

ವಿವಾಹಭೋಜನ!

ಬಿ.ಜಿ. ಕುಸುಮ

ಭಾರತದ ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಒಂದು ಸಂಸ್ಥಾನ. ಅದು ರಾಜರ ಆಳ್ವಿಕೆಯಲ್ಲಿತ್ತು. ಸರ್ ಶೇಷಾದ್ರಿ ಅಯ್ಯರ್‌ರವರು ದಿವಾನರಾಗಿದ್ದ ಕಾಲ. ಅವರ ಮನೆಯಲ್ಲಿ ಒಂದು ವಿವಾಹ ಸಮಾರಂಭ. ಆ ಸಂಬಂಧವಾಗಿ ಒಂದು ಭೋಜನಕೂಟ. ಆ ಔತಣಕೂಟಕ್ಕೆ ವಿಖ್ಯಾತ ವೀಣಾ ವಿದ್ವಾಂಸರುಗಳಾಗಿದ್ದ ವೀಣೆ ಸುಬ್ಬಣ್ಣನವರು, ವೀಣೆ ಶೇಷಣ್ಣನವರು, ಸಂಗೀತಗಾರರಾದ ಶ್ರೀ ವಾಸುದೇವಾಚಾರ್ಯರು ಇವರೆಲ್ಲ ಆಹ್ವಾನಿತರಾಗಿ ಹೋಗಿದ್ದರು. ಈ ಮೂವರು ತಮ್ಮ ಕ್ಷೇತ್ರವಾದ ಸಂಗೀತದಲ್ಲಿ ಪ್ರಕಾಂಡ ಪಂಡಿತರು, ಪ್ರವೀಣರು. ನಿತ್ಯ ಜೀವನದಲ್ಲೂ ರಸಿಕರು, ಸರಸಿಗಳು, ಹಾಸ್ಯವೃತ್ತಿ ಹಾಸುಹೊಕ್ಕಾದ ಮನೋಧರ್ಮದವರು.

ಆದಿನ ಭೋಜನ ಕೂಟದಲ್ಲಿ, ಊಟ ಆರಂಭವಾಗುವ ಸ್ವಲ್ಪ ಮೊದಲು ವೀಣೆ ಸುಬ್ಬಣ್ಣನವರು ವಾಸುದೇವಾಚಾರ್ಯರನ್ನು ಕರೆದುಕೊಂಡು ಪಾಕಶಾಲೆಯ ಕಡೆ ನಡೆದರು. ವಾಸುದೇವಾಚಾರ್ಯರು ಎಲ್ಲಿಗೆ ಹೋಗುತ್ತಿದ್ದೇವೆ, ಯಾಕೆ ಎಂದು ಪ್ರಶ್ನಿಸಿದರು. ''ಸುಮ್ಮನೆ ಬನ್ನಿ, ತಾನೇ ತಿಳಿಯುತ್ತೆ'' ಎಂದು ಸುಬ್ಬಣ್ಣನವರು ಆಚಾರ್ಯರನ್ನು ಸುಮ್ಮನಿರಿಸಿದರು. ಇಬ್ಬರೂ ಪಾಕಶಾಲೆಯನ್ನ ಪ್ರವೇಶಿಸಿದರು. ಸುಬ್ಬಣ್ಣನವರು, ಮುಖ್ಯ ಅಡಿಗೆಯವರನ್ನು ಕರೆದು, ಹೀಗೆ ಹೇಳಿದರು. ''ನೋಡಿ, ನಮ್ಮಿಬ್ಬರ ಮಧ್ಯೆ ನಮ್ಮ ಸ್ನೇಹಿತರೊಬ್ಬರು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಅವರಿಗೆ ವಯೋಧರ್ಮ, ನಾಲಿಗೆ ಚಪಲ ತುಂಬ. ಆದರೆ ಮೈಗೆ ಸ್ವಸ್ಥವಿಲ್ಲ. ಆದ್ದರಿಂದ ಅನ್ನ ಸಾರು ಹೊರತಾಗಿ ಮತ್ತೇನನ್ನೂ ಖಂಡಿತಾ ಅವರ ಎಲೆಗೆ ಬಡಿಸಲೇಬೇಡಿ'' ಅಡಿಗೆ ಭಟ್ಟರು ಒಪ್ಪಿ ತಮ್ಮ ಪರಿಚಾರಕರಿಗೂ ಈ ಬಗ್ಗೆ ತಾಕೀತು ಮಾಡಿದರು.

ಭೋಜನದ ವೇಳೆಯಲ್ಲಿ ವೀಣೆ ಶೇಷಣ್ಣನವರ ಒಂದು ಪಕ್ಕದಲ್ಲಿ ಸುಬ್ಬಣ್ಣನವರೂ ಇನ್ನೊಂದು ಪಕ್ಕದಲ್ಲಿ ಆಚಾರ್ಯರೂ ಕುಳಿತರು. ಬಡಿಸಲು ಪ್ರಾರಂಭವಾಯಿತು. ಒಂದಕ್ಕಿಂತ ಒಂದು ರುಚಿಯಾಗಿ, ಕಣ್ಣಿಗೆ ಆಕರ್ಷಕವಾಗಿ, ಮೂಗಿಗೆ ಹಿತವಾಗಿ, ನಾಲಗೆಯಲ್ಲಿ ನೀರೂರಿಸುವಂತಿದ್ದ ಅಡಿಗೆಗಳು ಒಂದರ ಹಿಂದೊಂದು ಬಂದು, ವಿಶಾಲವಾದ ಬಾಳೆ ಎಲೆಗಳಲ್ಲಿ ಸಾಲುಸಾಲಾಗಿ ಕುಳಿತವು. ಊಟಕ್ಕೆ ಬಂದವರಿಗೆಲ್ಲ ಆನಂದವೋ ಆನಂದ. ಆಸೆಯಿಂದ ಊಟ ಮಾಡುತ್ತ ಬಾಯಿ ಚಪ್ಪರಿಸುತ್ತಿದ್ದಾರೆ! ಆಚಾರ್ಯರೂ ಸುಬ್ಬಣ್ಣನವರೂ ಸಂತೋಷದಿಂದ ಸವಿಯುತ್ತಿದ್ದಾರೆ ಆ ರಸಕವಳವನ್ನು. ಆದರೆ ಶೇಷಣ್ಣನವರು? ಅವರ ಎಲೆಗೆ ಅನ್ನ ಸಾರು ಹೊರತಾಗಿ ಬೇರೆ ಏನನ್ನೂ ಬಡಿಸಿಲ್ಲ!! ಶೇಷಣ್ಣನವರಿಗೆ ಆಶ್ಚರ್ಯ, ಅವಮಾನ, ಕೋಪ ಎಲ್ಲಾ ಒಟ್ಟೊಟ್ಟಾಗಿ ನುಗ್ಗುತ್ತಿವೆ. ಆದರೆ ''ಹೀಗೆಕೆ ಬಡಿಸಿದ್ದೀರಿ ನನಗೂ ಎಲ್ಲಾ ಬಡಿಸಿ'' ಎಂದು ಅಡಿಗೆಯವರನ್ನು ಕೇಳಲು ಬಿಂಕ ಬಿಡಬೇಕಲ್ಲ?

ಹೊಟ್ಟೆಯಲ್ಲೇ ವೀಣೆಯ ತಾಳ, ಮೀಟು ಎಲ್ಲಾ ಆಗುತ್ತಿವೆ! ಆ ವೇಳೆಗೆ, ಆ ಕಾಲದ ಅಪ್ಪಟ ತುಪ್ಪದ ಘಮ ಘಮಿಸುವ ಭಕ್ಷ್ಯಗಳು ಆಗಮಿಸಿದವು, ದೊಡ್ಡ ಬಾಳೆ ಎಲೆಗಳನ್ನು ಪೂರ್ತಿ ಆವರಿಸುವಷ್ಟು ದೊಡ್ಡ ಗಾತ್ರದ, ಕಣ್ಣು ತುಂಬಿ ತಣಿಸುವ ಭಕ್ಷ್ಯಗಳು! ಮೂಗಿಗೆ ಹಿತವಾದ ಕಂಪು; ನಾಲಗೆಯಲ್ಲಿ ನೀರು!! ಶೇಷಣ್ಣನವರಿಗೆ ಇನ್ನು ತಡೆಯಲಾಗಲಿಲ್ಲ. ಬಡಿಸುವವರನ್ನೇ ಕೇಳಲು ಪ್ರಯತ್ನಿಸಿದರು. ಆದರೆ ಪಾಪ, ಶೇಷಣ್ಣನವರಿಗೆ ಬಿಕ್ಕಲು. ಅವರು ಮಾತಾಡುವುದರೊಳಗೆ ಬಡಿಸುವವನು ಮುಂದಿನ ಎರಡು ಎಲೆ ದಾಟಿರುತ್ತಿದ್ದ. ಶೇಷಣ್ಣನವರಿಗೆ ಅಕ್ಷರಶಃ ಆಡಲಾರದ ಅನುಭವಿಸಲಾರದ ಸ್ಥಿತಿ. ಅವರ ಹೊಟ್ಟೆ ಉರಿ ಹೆಚ್ಚಿಸುವಂತೆ ಅಕ್ಕಪಕ್ಕದ ಗೆಳೆಯರು ನಿರ್‍ಯೋಚನೆಯಿಂದ ನಗುತ್ತಾ ತಿಂದು ತೇಗುತ್ತಿದ್ದಾರೆ.

ಇನ್ನೇನು, ಊಟ ಮುಕ್ತಾಯದ ಹಂತಕ್ಕೆ ಬಂದಾಗ ದಿವಾನರು ಎಲ್ಲರ ಪಂಕ್ತಿಗೂ ಉಪಚಾರದ ಮಾತುಗಳನ್ನು ಆಡುತ್ತ ಬಂದರು. ಆಗ ಶೇಷಣ್ಣನವರ ಖಾಲಿ ಎಲೆ ಅವರ ಕಣ್ಣಿಗೆ ಬಿತ್ತು; ಆಶ್ಚರ್ಯವಾಯಿತು. ಅವರ ಹಿಂದೆ ಬರುತ್ತಿದ್ದ ಅಡಿಗೆ ಭಟ್ಟ ತನಗೆ ಸುಬ್ಬಣ್ಣನವರು ಹೇಳಿದ್ದನ್ನು ತಿಳಿಸಿದ. ದಿವಾನರು ''ಏನು ಶೇಷಣ್ಣನವರೇ, ಮೈಯಲ್ಲಿ ಸ್ವಸ್ಥವಿಲ್ಲವಂತೆ? ಏನಾಗಿದೆ?'' ಎಂದರು ಕಳಕಳಿಯಿಂದ. ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗಿ, ಶೇಷಣ್ಣನವರು ತಮ್ಮ ಅಕ್ಕಪಕ್ಕದ ಗೆಳೆಯರಿಬ್ಬರ ಕಡೆಗೂ ಕಿಡಿನೋಟಕಾರಿದರು. ಸುಬ್ಬಣ್ಣನವರು ತಡೆ ಹಿಡಿದಿದ್ದ ನಗೆಯ ಬುಗ್ಗೆ ಚಿಮ್ಮಿತು. ದಿವಾನರಿಗೂ ಇತರರಿಗೂ ವಿಷಯ ಅರ್ಥವಾಗಿ ನಗೆಗಡಲು ಭೋರ್ಗರೆಯಿತು. (ಶೇಷಣ್ಣನವರ ಊಟ, ಮೊದಲಿನಿಂದ ಪ್ರಾರಂಭವಾಯಿತೂನ್ನಿ.)



''ಟಿಕೆಟ್ ಬೇಡ, ಮಂತ್ರಿ ಪದವಿ ಕೊಡೀ ಅಂತಾನಲ್ಲಾ ರೀ, ಇವ್ನ''



"ಒಳ್ಳೇ ಮಾತ್ನಲ್ಲಿ ಇಳೀತಿಯೋ, ಇಲ್ಲಾ
ನಾನೇ ಹತ್ತಿ ಬರ್ಲೋ"

ಅವಸರವಿಲ್ಲ

– ಕು.ಗೋ.

ಮುಖ ಮಾತ್ರವಲ್ಲ, ಇಡೀ ದೇಹವನ್ನೇ ನೋಡಿಕೊಳ್ಳಬಹುದಾದ ಒಂದು ದೊಡ್ಡ ಕನ್ನಡಿಯನ್ನು ಎಲ್ಲರೂ ತಿರುಗುವಲ್ಲಿ ನಮ್ಮ ಮನೆಯ ಗೋಡೆಗೆ ನೇತು ಹಾಕಿದ್ದೆ ಅದರ ಮೇಲ್ತುದಿಯಲ್ಲಿ ಒಂದು ಗಡಿಯಾರದ ಗೂಡು. ಅದರೊಳಗೊಂದು ಅಲಾರಂ ಟೈಂಪೀಸ್. ಆ ಗಡಿಯಾರ ದಿನಕ್ಕೆ ಎರಡು ಬಾರಿ ಮಾತ್ರ ಸರಿಯಾದ ಸಮಯ ತೋರಿಸಲು ಶುರು ಮಾಡಿ ಸುಮಾರು ತಿಂಗಳಾಗಿತ್ತು. ಎಷ್ಟು ಕಿವಿ ಹಿಂಡಿದರೂ ಒಂದು ರೀತಿಯ ಮೊಂಡುತನ ತೋರಿಸುತ್ತಲೇ 'ನಾನು ಇರುವುದೇ ಹೀಗೆ' ಎಂದುಕೊಂಡು ಒಂದು ರೀತಿಯ ಅಲಂಕಾರ ಸಾಮಗ್ರಿಯಾಗಿ ಗೂಡಿನೊಳಗಿತ್ತು. ಕ್ರಿಕೆಟ್‌ಗೇಮ್ ಇನ್‌ಡೋರ್ ಗೇಮ್ ಆಗಿ ಮಕ್ಕಳು ಎಗರಿಸಿದ್ದ ಚೆಂಡು ಕನ್ನಡಿಯ ಒಂದು ಭಾಗವನ್ನು ಎಗರಿಸಿ ಕೆಲವು ಭಾಗಗಳಲ್ಲಿ ಬಿರುಕುಗಳನ್ನು ನಿರ್ಮಿಸಿತ್ತು. ತುಂಡಾದ ಜಾಗಕ್ಕೆಲ್ಲ "Insure and be secure' 'ಮಮತೆಯ ಪ್ರತೀಕ ಜೀವ ವಿಮೆ', 'ಹಿಮುಗಾಗಿ ಉಳಿಸಿ' ಎಂಬಿತ್ಯಾದಿ ಎಲ್ಲೈಸಿಯ ಸ್ಟಿಕ್ಕರ್‌ಗಳನ್ನು ಅಂಟಿಸಿದ್ದೆ. ಅಂತೂ ಮೈ ತುಂಬ ಬ್ಯಾಂಡೇಜ್ ಧರಿಸಿದ್ದ ರೋಗಿಯಾಗಿತ್ತು ಆ ಕನ್ನಡಿ. ಮಗ, ಸೊಸೆ, ಮೊಮ್ಮಕ್ಕಳನ್ನು ನೋಡಿ ಹೋಗಲು ಬಂದ ನನ್ನ ಅಮ್ಮ 'ಒಡೆದ ಕನ್ನಡಿ ಇರಬಾರದು, ದರಿದ್ರ ಒಂದೋ ಅದನ್ನು ಬಿಸಾಡು ಅಥವಾ ಅಷ್ಟು ಭಾಗವನ್ನು ಕತ್ತರಿಸಿ ಸರಿ ಮಾಡಿಸಿಡು' ಎಂದು ಬುದ್ಧಿವಾದ ಹೇಳಿ ಹೋಗಿದ್ದಳು. 'ಅನುಕೂಲವಾದಾಗ ಮಾಡಿಸಿದರಾಯಿತು ಏನು ಅವರಸ' ಎಂದು ದಿನ ದೂಡುತ್ತಲೇ ಬಂದೆ. ಅದರ ಬಳಿಯಲ್ಲೆ ಬಾಚಣಿಗೆ, ಪೌಡರ್ ಡಬ್ಬಿ, ಎಣ್ಣೆ ಬಾಟಲ್, ಸ್ನೋಜಾಡಿ ಇದ್ದುದರಿಂದ ಸಾಧಾರಣ ಮಟ್ಟಿಗಿನ ಅಲಂಕಾರ ಮಾಡಿಕೊಳ್ಳಲು ಆ ಕನ್ನಡಿಯ ಮುಂದೆಯೇ ನಿಲ್ಲಬೇಕಿತ್ತು. ಸ್ನೋ, ಪೌಡರ್ ನಮ್ಮ ಮನೆಯಲ್ಲಿ ಯಾರೂ ಉಪಯೋಗಿಸುತ್ತಿರಲಿಲ್ಲ. ಪ್ರತಿಷ್ಠೆಗಷ್ಟೇ ಅವು ಇದ್ದವು. ನಮ್ಮ ಮುಖ ಒಂದೊಂದು ಬಾರಿ ಒಂದೊಂದು ಥರಾ ಕಾಣಿಸತೊಡಗಿದಾಗ ಮನೆಯವರೆಲ್ಲರ ಒತ್ತಾಸೆಯ ಮೇರೆಗೆ ಅದನ್ನು ಸರಿಮಾಡಿಸಲು ಕನ್ನಡಿಯ ಅಂಗಡಿಗೆ ತೆಗೆದುಕೊಂಡು ಹೋಗಿ ಕೊಟ್ಟೆ. ಒಡೆದ ಜಾಗವನ್ನು ವಜ್ರದಿಂದ ಕತ್ತರಿಸಿ ಸಣ್ಣ ಸಣ್ಣ ಕನ್ನಡಿಗಳನ್ನಾಗಿ ಮಾಡಿ ಫ್ರೇಮ್ ಹಾಕಿ ಕೊಡಲು ಹೇಳಿದೆ. ಎಲ್ಲರಿಗೂ ಒಂದೊಂದು ಕನ್ನಡಿ ಸಿಗುತ್ತದಲ್ಲಾ ಎಂಬ ಆಸೆಯಿಂದ 'ಅವಸರವಿಲ್ಲವಲ್ಲಾ' ಎಂದ ಅಂಗಡಿಯಾತ. ಆತನಿಗೆ ನೂರೆಂಟು ಕೆಲಸ. 'ಅವಸರವೇನೂ ಇಲ್ಲ. ಆದರೂ ಆದಷ್ಟು ಬೇಗ ಮಾಡಿಕೊಡಿ' ಎಂದೆ. ಆಗಲಿ ಇನ್ನು ಎಂಟು ದಿನ ಬಿಟ್ಟು ಬನ್ನಿ ಎಂದ. ಕನ್ನಡಿಯನ್ನು ಅಲ್ಲಿ ಬಿಟ್ಟು ಬಂದೆ. ಎಂಟೆಂಟು ದಿನಗಳಿಗೊಮ್ಮೆ ಹೋಗಿ ಬರುತ್ತಿದ್ದೇನೆ. ಅದು ಇನ್ನೂ ಆಪರೇಷನ್ ಟೇಬಲ್ಲಿಗೆ ಹೋಗಿಲ್ಲ.

ಕನ್ನಡಿ ಹೋದ ಮೇಲೆ ಗಡಿಯಾರಕ್ಕೂ ಒಂದು ಗತಿ ಕಾಣಿಸಬೇಕೆಂದೆನಿಸಿತು. ಹೊಸ ಗಡಿಯಾರ ಅಗತ್ಯವಿಲ್ಲ. ಮನೆಗೆ ಗಡಿಯಾರವೇ ಅಗತ್ಯವಿಲ್ಲವೆನ್ನುವವ ನಾನು. ಬೆಳಗ್ಗೆ ಪತ್ರಿಕೆಯವನ ಸೈಕಲ್ ಬೆಲ್ ಕೇಳಿದಾಗ ಐದೂವರೆ ಗಂಟೆ, ಹಾಲಿನವ ಬರುವಾಗ ಆರುಘಂಟೆ, ಅಂಬುಜಮ್ಮ ಮೈ ಇಳಿಸಲು ವಾಕಿಂಗ್ ಹೊರಟು ನಮ್ಮ ಮನೆ ಮುಂದಿನ ರಸ್ತೆಯಲ್ಲಿ ಓಡುವಂತೆ ನಡೆಯುವ ಸಮಯ ಆರೂವರೆ ಘಂಟೆ, ಹೀಗೆ ಸಮಯ ತನ್ನಿಂತಾನೇ ಗೊತ್ತಾಗುತ್ತಿತ್ತು. ಅಲ್ಲದೆ ಪೇಟೆಯಲ್ಲಿ ನಡೆಯುವಾಗ ದಿನಸಿ ಅಂಗಡಿಯ, ಕ್ಷೌರದಂಗಡಿಯ, ಹೋಟೆಲಿನ, ಗಡಿಯಾರದಂಗಡಿಯ ನಾನಾ ನಮೂನೆಯ ಗಡಿಯಾರಗಳು ಸ್ವಲ್ಪ ಹೆಚ್ಚು ಕಡಿಮೆ ಸರಿಯಾದ ಸಮಯವನ್ನು ತೋರಿಸುತ್ತಿದ್ದರಿಂದ ಮನೆ ಗಡಿಯಾರವನ್ನು ನಾನು ನೆಚ್ಚಿಕೊಂಡಿರಲಿಲ್ಲ. ವಾಚ್ ಅಂತೂ ರಿಪೇರಿಗೆ ಹೋಗಿ ಆಗಲೇ ಒಂಭತ್ತೂವರೆ ತಿಂಗಳಾಗಿದೆ. 'ಅವಸರವಿಲ್ಲ - ನಿಧಾನವಾಗಿ ರಿಪೇರಿ ಮಾಡಿಕೊಡಿ' ಎಂದು ಹೇಳುತ್ತಾ ಆ ವಾಚು ಆ ಅಂಗಡಿಯಲ್ಲಿ ಇನ್ನೂ ರಿಪೇರಿಗಾಗಿ ಕಾಯುತ್ತಾ ಇದೆ ಎಂಬುದನ್ನು ದೃಢೀಕರಿಸಿಕೊಂಡು ಬರುತ್ತಿದ್ದೆ. ಅರ್ಜೆಂಟ್ ಆಗ ಬೇಕೆಂದು ಹೇಳಿದರೂ ಆತನಿಗೆ ರಿಪೇರಿ ಮಾಡಲು ನನ್ನದೊಂದೇ ವಾಚ್ ಇರುವುದೇ? 'ಆಗಲಿ, ಆಗಲಿ' ಎಂದು ನಾನು ಅಷ್ಟೊಂದು ಅವಸರ ಮಾಡಲಿಲ್ಲ. ಆದರೆ ಆ ಅಲಾರಾಂ ಗಡಿಯಾರವನ್ನು ಪೋಸ್ಟ್ ಆಫೀಸಿನ ಬಳಿಯ ಗಡಿಯಾರ ರಿಪೇರಿಯವರ ಹತ್ತಿರ ಕೊಟ್ಟೆ. ಆತ ತುಂಬ ನಿಷ್ಣಾತನೆಂದುಕೊಂಡು ಜನರು ಬಿಡಬೇಕಲ್ಲಾ ಸಂಜೆ ಹೊತ್ತು ಕೆಲಸವಿಲ್ಲದವರೆಲ್ಲಾ ಬಂದು ಅವನ ಹತ್ತಿರ ಪಟ್ಟಾಂಗ ಹೊಡೆಯುತ್ತಾ ನನ್ನ ಗಡಿಯಾರ ರಿಪೇರಿಗೆ ಕೈ ಹಾಕದಂತೆ ಮಾಡುತ್ತಿದ್ದರು. ಅದಕ್ಕೂ ಈಗ ಏಳು ತಿಂಗಳಾಯಿತು. ಪ್ರತಿನಿತ್ಯ ಅಂಗಡಿಯ ಎದುರು ನಿಂತು ಆ ಗಡಿಯಾರ ಇನ್ನೂ ರಿಪೇರಿಯಾಗದೇ ಇರುವುದನ್ನು ನೋಡಿ ಅದರ ಅವಸ್ಥೆಗೆ ಮರುಗಿ 'ನಿಮಗೇನೂ ಅವಸರವಿಲ್ಲವಲ್ಲಾ ಸ್ವಲ್ಪ ನಿಧಾನವಾದರೂ ಸರಿಯಾಗಿ ರಿಪೇರಿ ಮಾಡಿ ಇಡುತ್ತೇನೆ' ಎಂಬ ಆಶ್ವಾಸನೆಯನ್ನು ಪಡೆದು ಬರುತ್ತಿದ್ದೇನೆ.

ನಮ್ಮ ಮನೆಯ ರೇಡಿಯೋ ತುಂಬ ಹಳೆಯದು. ನನ್ನ ಮದುವೆ ಸಯಮ ಯಾರೋ ನನಗಾಗದವರು ಪ್ರೆಸೆಂಟ್ ಮಾಡಿದ್ದು, ಮದುವೆಯಾದ ಹೊಸದರಲ್ಲಿ ರೇಡಿಯೋ ಕೇಳುವಷ್ಟು ಪುರುಸೊತ್ತು ಎಲ್ಲಿರುತ್ತದೆ? ಅಪರೂಪಕ್ಕೊಮ್ಮೆ ಅದರ ಕಿವಿ ಹಿಂಡುತ್ತಿದ್ದೆ. ನಮ್ಮ ಮಾವನಿಗೆ ದಕ್ಷಿಣಾದಿ ಸಂಗೀತವೆಂದರೆ ಬಹಳ ಇಷ್ಟ. ರಾತ್ರಿ ಹತ್ತು ಗಂಟೆಯ ಮೇಲೆ ರೇಡಿಯೋ ಆನ್ ಮಾಡಿ ಸಂಗೀತ ಕೇಳಿ ನಮ್ಮದೊಂದು ಸಣ್ಣ ನಿದ್ರೆ ಆದ ಮೇಲೆ ಅವರು ರೇಡಿಯೋ ಆಫ್ ಮಾಡಿ ಮಲಗುತ್ತಿದ್ದರು. ಬೆಳಗ್ಗೆ ಚಿಂತನ, ಉದಯರಾಗ, ಸಂಸ್ಕೃತ ವಾರ್ತೆಗೂ ಅದರ ಉಪಯೋಗ ಆಗುತ್ತಿತ್ತು. ಇತ್ತೀಚೆಗೆ ಅವರು ಬಂದಾಗ ಬರೀ ಗುರ್ ಗುರ್ ಮಾಡಿ ಏನೋ ಒಂದು ರೀತಿಯ ದಾಕ್ಷಿಣ್ಯದ ಸಂಗೀತವನ್ನು ಹೊಮ್ಮಿಸತೊಡಗಿತು - ಇದಕ್ಕೂ ರಿಪೇರಿ ಅಂಗಡಿಯಲ್ಲಿ ಹೋಗಿ ಸೇರಿಕೊಳ್ಳುವ ದುಷ್ಟ ಬುದ್ಧಿ ಬಂದಿದೆ ಎನಿಸಿತು - ಮಾವ ಇನ್ನೊಂದು ಬಾರಿ ಬರುವ ಮೊದಲೇ ಈ ರೇಡಿಯೋ ರಿಪೇರಿ ಮಾಡಿಸಿ ತಂದಿಡಬೇಕೆಂದು ರಿಕ್ಷಾದಲ್ಲಿ ಕೊಂಡು

ಹೋದೆ. ''ಅವಸರವಿಲ್ಲವಲ್ಲಾ'' ಎಂದ - 'ಖಂಡಿತವಾಗಿಯೂ ಇಲ್ಲ' ಎಂದೆ. ಆದರೆ 'ಖಂಡಿತವಾಗಿಯೂ ' ಎಂಬ ಪದವನ್ನು ಆತನಿಗೆ ಕೇಳಿಸದ ಹಾಗೆ ಮನಸ್ಸಿನಲ್ಲೇ ಅಂದುಕೊಂಡೆ, ಒಂದು ವರ್ಷಕ್ಕೆ ಹತ್ತಿರ ಬಂತು. ಬೊಂಬಾಯಿಯಿಂದ ಬಂದ ನನ್ನ ಭಾವಮೈದುನ 'ನಾನೇ ರಿಪೇರಿ ಮಾಡಿಕೊಡುತ್ತಿದ್ದೆನಲ್ಲಾ' ಎಂದ. ಆದರೆ ಅಂಗಡಿಯಿಂದ ರೇಡಿಯೋವನ್ನು ವಾಪಸ್ಸು ತಂದು ಅವನ ಕೈಗೆ ಕೊಡಲು ನನಗೆ ಇಷ್ಟವಿರಲಿಲ್ಲ. ಇಡೀ ಮನೆಯಲ್ಲಿ ಅದರ ಭಾಗಗಳನ್ನೆಲ್ಲಾ ಹರಡಿ ಹಾಕಿ 'ಅದು ಹೋಗಿದೆ, ಇದು ಹೋಗಿದೆ' ಎಂದು ಒಂದೊಂದೇ ಬಿಡಿಭಾಗವನ್ನು ಹೊಸದಾಗಿ ತಂದು ಅದಕ್ಕೆ ಅಂಟಿಸುವ ಕೆಲಸವನ್ನು ನೋಡಲು ನನಗೆ ವ್ಯವಧಾನವಿರಲಿಲ್ಲ. ಖರ್ಚು ಮಾಡುವ 'ಅನುಕೂಲ'ವೂ ಇರಲಿಲ್ಲ. 'ರೇಡಿಯೋ ರಿಪೇರಿಯವ ಭಾರೀ ಎಕ್ಸ್‌ಪರ್ಟ್. ಸಧ್ಯದಲ್ಲೇ ರಿಪೇರಿ ಮಾಡಿಕೊಡುತ್ತೇನೆ ಎಂದಿದ್ದಾನೆ. ನೀನು ಬೊಂಬಾಯಿಗೆ ಹೋಗುವುದರೊಳಗೇ ಸಿಗಬಹುದು' ಎಂದೆ. ಆತ ಆಮೇಲೆ ಮೂರು ಬಾರಿ ಬೊಂಬಾಯಿಗೆ ಹೋಗಿ ಬಂದ. ಆತ ಅಥವಾ ನನ್ನ ಮಾವ ಮುಂದಿನ ಬಾರಿ ಬರುವ ಸಮಯ ರೇಡಿಯೋ ರಿಪೇರಿಯಾಗಿ ಬಂದರೆ ಸಾಕೆಂದುಕೊಂಡಿದ್ದೇನೆ. ಅಂಥ ಅವಸರವೇನೂ ಇಲ್ಲವಲ್ಲಾ!

ಫೆಬ್ರವರಿಯಲ್ಲಿ ಮಳೆ ಬಂದದ್ದು ನಿಮಗೆ ತಿಳಿದಿರಲಿಕ್ಕಿಲ್ಲ ಸಿಡಿಲು ಗುಡುಗಿನ ಆರ್ಭಟ ಖಂಡಿತಾ ಕೇಳಿಸಿರಬಹುದು ಪ್ಲಗ್ ತೆಗೆದಿಡಿ ಎಂದರೂ ಯಾರೂ ಕೇಳಲಿಲ್ಲ. ಲೇಟ್ ಶೋ ಸಿನೆಮಾ ನೋಡಿ ಟಿ.ವಿ. ಆಫ್ ಮಾಡಿ ಮಲಗಿದ್ದರು ಮಾರನೆಯ ದಿನ ರಂಗೋಲಿಯ ಬದಲು ಬರೀ ಅರಳು ಹುಡಿ ಟಿ.ವಿ.ಯಲ್ಲಿ ಕಾಣಿಸತೊಡಗಿತು. ಸಾಧಾರಣವಾಗಿ ಗೊತ್ತಿದ್ದ ಬಟನ್‌ಗಳೆಲ್ಲವನ್ನು ಒತ್ತಿದರೂ ಬರೀ ಅರಳು ಹುಡಿ ಮತ್ತು ವಿಚಿತ್ರ ಶಬ್ಧ. ಸ್ವಲ್ಪ ಹೊತ್ತಾದ ಮೇಲೆ ಅದೂ ಇಲ್ಲ. ಯಾವ ಭಾಗಕ್ಕೆ ಸಿಡಿಲು ಹೊಡೆದಿದೆಯೋ? ಟಿ.ವಿ.ಗೆ ಇನ್ಶೂರ್ ಕೂಡಾ ಮಾಡಿರಲಿಲ್ಲ. ಸ್ವಲ್ಪ ದಿವಸ ಹಾಗೆಯೇ ಬಿಟ್ಟೆ. 'ರಿಪೇರಿ ಮಾಡಿಸಿ. ಟಿ.ವಿ. ಇಲ್ಲದೆ ಬರೀ ಬೋರ್' - ಈ ಮಂತ್ರ ದಿವಸಕ್ಕೆ ಏಳೆಂಟು ಬಾರಿ ಕೇಳಿಸತೊಡಗಿತು. ಆಫೀಸಿಗೆ ಹೊರಟಾಗ ಯದುಪತಿರಾಯರ ರಿಕ್ಷಾ ಬಂತು. ಕಿಯೋನಿಕ್ಸ್ ಅಂತೆ. ಅವರ ಅಂಗಡಿಯವರೆಗೆ ರಿಕ್ಷಾ ಹೋಯಿತು - ಅದರೊಟ್ಟಿಗೆ ನನ್ನ ಬುಷ್ ಟಿ.ವಿ. ಕೂಡಾ. 'ಮೆಕ್ಯಾನಿಕ್ ರಜೆಯಲ್ಲಿದ್ದಾನೆ, ನಾಲ್ಕು ದಿನ ಬಿಟ್ಟು ಬನ್ನಿ ಅಥವಾ ಆಮೇಲೆ ಬನ್ನಿ' ಎಂದ ಅಲ್ಲಿಯ ಪ್ರೊಪ್ರೈಟರ್. ಪುನಃ ರಿಕ್ಷಾ ಬಾಡಿಗೆ ದಂಡ- 'ಪರವಾಗಿಲ್ಲ, ನನಗೆ ಅವಸರವೇನೂ ಇಲ್ಲ. ಆತ ಬಂದ ಮೇಲೆಯೇ ರಿಪೇರಿ ಮಾಡಿಸಿ ಇಡಿ' ಎಂದೆ. ಈಗ ಮೆಕ್ಯಾನಿಕ್ ಬಂದಿದ್ದಾನೆ. ಆದರೆ ಆ ದಿನದ ಸಿಡಿಲು ಇನ್ನೆಷ್ಟು ಟಿ.ವಿ.ಗಳ ಠೀವಿಯನ್ನು ಮುರಿದಿದೆಯೋ! ರಿಪೇರಿಗೆ ತುಂಬಾ ಟಿ.ವಿ.ಗಳು ಬಂದಿದ್ದಾವೆ, ಅವುಗಳೊಟ್ಟಿಗೆ ನನ್ನದು ಕೂಡಾ. 'ಅವಸರವಿಲ್ಲ' ಎಂದು ಹೇಳಿ ಬಂದೆ, ಆಮೇಲೆ ಹದಿನೇಳು ಬಾರಿ ಆ ಅಂಗಡಿಯ ಮುಂದೆ ಸುಳಿದಾಡಿ 'ಇನ್ನೂ ಆಗಿಲ್ಲ' ಎನ್ನಿಸಿಕೊಂಡು ಬಂದಿದ್ದೇನೆ. ನಿಧಾನವಾಗಿ ಆಗಲಿ, ಅವಸರವಿಲ್ಲ.

ಬೇಸಿಗೆ ರಜೆಗೆ ಹೈದರಾಬಾದ್, ಬೊಂಬಾಯಿ, ಮದ್ರಾಸು, ಬೆಂಗಳೂರು, ಹತ್ತಿರದ ಮಲ್ಪೆ ತೊಟ್ಟಂ ನಿಂದಲೂ ನೆಂಟರು ಇಷ್ಟರು ಬಂದಿದ್ದರು- ಎಲ್ಲರೂ ಒಟ್ಟಾಗುವುದೇ ಅಪರೂಪ. ನನ್ನ ಮಗನ ಹತ್ತಿರ ಒಂದು ಒಳ್ಳೆಯ ಕ್ಯಾಮೆರಾ ಇತ್ತು. ಫೊಟೋಗ್ರಫಿ ಶಿಬಿರಕ್ಕೂ ಹೋಗಿ ಬಂದವ. ಆ ಕ್ಯಾಮೆರಾದಲ್ಲಿ ಅನೇಕ ಫೋಟೋ ತೆಗೆದಿದ್ದಾನೆ. ಮನೆ ತುಂಬಾ ಆಲ್ಬಂಗಳು ಇವೆ. ಆ ದಿನವೂ ಹೊಸ ರೀಲ್ ಹಾಕಿ ಕ್ಲಿಕ್ ಕ್ಲಿಕ್ ಮಾಡಿದ. ಗುಂಪಾಗಿ, ಬಿಡಿಬಿಡಿಯಾಗಿ, ನಾನಾ ವೇಷಭೂಷಣಗಳಲ್ಲಿ, ನಿಲ್ಲಿಸಿ, ಕೂರಿಸಿ, ನಗಿಸಿ ಫೊಟೋ ತೆಗೆದ. ಮನೆಯೊಳಗೆ, ತೋಟದಲ್ಲಿ, ಅಡುಗೆ ಮನೆಯಲ್ಲಿ, ಊಟ ಮಾಡುವಾಗ, ತಿಂಡಿ ತಿನ್ನುವಾಗ ಎಲ್ಲಾ ಪೋಸ್‌ಗಳ ಫೋಟೋ ತೆಗೆದದ್ದೇ ತೆಗೆದದ್ದು. ಗುರುಕೃಪಾದಲ್ಲಿ ಡೆವಲೆಪ್ ಮೆಂಟಿಗೆ ಕೊಟ್ಟ. 'ನಾಳೆ ಬನ್ನಿ' ಎಂದರಂತೆ, ಒಂದಷ್ಟೂ ಮಸಿ ತುಂಬಿಕೊಂಡ ಕಾಗದದ ತುಂಡುಗಳನ್ನು ಮನೆಗೆ ತಂದಾಗ ಅವನ ಮುಖವೂ ಮಸಿಗಟ್ಟಿತ್ತು. ಕ್ಯಾಮೆರಾದ ಒಳಗಿನ ಯಾವುದೋ ಭಾಗ ಹೋಗಿದೆಯೆಂತೆ. ಬಹುಶಃ ರಮೇಶ ತೆಗೆದುಕೊಂಡು ಹೋದವ ಹಾಳು ಮಾಡಿ ತಂದುಕೊಟ್ಟಿರಬೇಕು. ಅದು ಫಾರಿನ್ ಕ್ಯಾಮೆರಾ ಬೇರೆ, ಅದರ ಪಾರ್ಟ್ ಇಲ್ಲಿ ಸಿಗೋಲ್ಲ, ಬೆಂಗಳೂರಿಗೋ, ಬೊಂಬಾಯಿಗೋ ಕಳಿಸಬೇಕು ಅಂತಿದ್ದ. ಈಶ್ವರಯ್ಯನವರ ಹತ್ತಿರ ಒಂದು ಮಾತು ಕೇಳಿ ನೋಡಬಹುದಿತ್ತು. ಅವರೇ ರಿಪೇರಿ ಮಾಡಿಕೊಡುತ್ತಿದ್ದರು. ಅವನಿಗೆ ನನಗಿಂತಲೂ ಹೆಚ್ಚು ದಾಕ್ಷಿಣ್ಯ. ಹಾಗಾಗಿ ಅವರ ಹತ್ತಿರ ಹೋಗಲಿಲ್ಲ. ಬೆಂಗಳೂರಿನಲ್ಲಿ ಎಂ.ಡಿ. ಮಾಡುತ್ತಿದ್ದ ಅವನ ಸ್ನೇಹಿತನ ಹತ್ತಿರ ಕಳಿಸಿದ್ದಾನೆ ರಿಪೇರಿ ಮಾಡಿಸಲು, 'ನಿಮಗೇನೂ ಅವಸರವಿಲ್ಲವಲ್ಲಾ - ನಾನು ಮುಂದಿನ ಜೂನಿಗೆ ಊರಿಗೆ ಬರುವಾಗ ತರುತ್ತೇನೆ' ಎಂದು ಹೇಳಿ ತೆಗೆದುಕೊಂಡು ಹೋದ. ಅವನು ಜೂನ್‌ನಲ್ಲೂ ಬಂದ, ಡಿಸೆಂಬರ್‌ನಲ್ಲೂ ಬಂದ. ಇನ್ನೊಂದು ಜೂನೂ ಬರಲಿಕ್ಕಾಯಿತು ಆಗಲಾದರೂ ಕ್ಯಾಮೆರಾ ರಿಪೇರಿಯಾಗಿ ಬರಬಹುದೆಂದು ಕಾದುಕೊಂಡಿದ್ದಾನೆ. 'ಅವಸರವಿಲ್ಲ, ನಿಧಾನವಾಗಿ ಬರಲಿ' ಎನ್ನುತ್ತಾ ಇರುತ್ತೇನೆ ನಾನು.

ನಮ್ಮ ಮನೆಯಲ್ಲಿ ಮೂರು ಸೋಫಾಗಳಿದ್ದವು ಈಗ ಒಂದು ಮನೆಯಲ್ಲಿದೆ, ಎರಡು ರಿಪೇರಿಗೆ ಹೋಗಿವೆ. ಮಕ್ಕಳು ಸೇರಿದ ಮೇಲೆ ಸುಮ್ಮನಿರುತ್ತಾವೆಯೇ! ಸೋಫಾದ ಮೇಲೆ ಹಾರಿ ಕುಣಿದು ಕುಪ್ಪಳಿಸಿ ರೆಕ್ಸಿನ್ ಎಲ್ಲಾ ಹರಿದು ಹೋಗಿ, ಸ್ಪ್ರಿಂಗ್ ತನ್ನ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಂಡು ಅದರಲ್ಲಿ ಕುಳಿತಾಗ ಭೀಷ್ಮನ ಸರಳಮಂಚದ ಅನುಭವವಾಗುತ್ತಿತ್ತು. ಒಂದೆರಡು ಬಾರಿ ನನ್ನ ಹೆಂಡತಿಯೇ ಅಲ್ಪಸ್ವಲ್ಪ ರಿಪೇರಿ ಮಾಡಿದಳು. ಆ ರಿಪೇರಿ ಹೆಚ್ಚು ದಿನ ಉಳಿಯಲಿಲ್ಲ. ಮನೆಯ ಬಳಿಯೇ ಬಂದ ಸೋಫಾ ರಿಪೇರಿಯವ ಹುಲ್ಲಿನ ಗಾಡಿಯಲ್ಲಿ ಹಾಕಿಕೊಂಡು ಹೋದ. 'ಎಂಟೇ ದಿನದಲ್ಲಿ ರಿಪೇರಿ ಮಾಡಿ ತರುತ್ತೇನೆ' ಎಂದ. 'ಅವಸರವಿಲ್ಲ ಸದ್ಯಕ್ಕೆ ಇನ್ನೊಂದು ಸೋಫಾ ಮನೆಯಲ್ಲಿದೆ, ನೀನು ನಿಧಾನವಾಗಿ ಸರಿಯಾಗಿ ರಿಪೇರಿ ಮಾಡಿ ತಂದರಾಯಿತು. ಪದೇ ಪದೇ ರಿಪೇರಿಗೆ ಕಳುಸುವ ಹಾಗೆ ಆಗಬಾರದು' ಎಂದೆ, ನನಗೆ

ಅವಸರವಿಲ್ಲದಿರುವಾಗ ಅವನಿಗೆ ಅವಸರವಿರುತ್ತದೆಯೇ? ಹೋದ ಮಳೆಗಾಲದಲ್ಲಿ ಕೊಟ್ಟದ್ದು. ಈ ಬಾರಿ ಮಳೆಗಾಲ ಉಂಟೋ ಇಲ್ಲವೋ ಗೊತ್ತಿಲ್ಲ ಆದರೂ ಅದಷ್ಟು ಬೇಗ ಸೋಫಾಗಳು ರಿಪೇರಿಯಾಗಿ ಬರಬಹುದೆಂದು ಕೊಂಡಿದ್ದೇನೆ. ಮತ್ತೊಂದರದ್ದೂ ಸೀಟ್ ಹರಿದಿದೆ, ಅಲ್ಲಲ್ಲೇ ತೇಪೆ ಹಾಕಿ ಬಂದವರಿಗೆ ಸ್ವಲ್ಪ ಸಮಯವಾದರೂ ಆಸನವೂರಲು ಅನುಕೂಲವಾಗುತ್ತದೆಂದು ಅದನ್ನು ಇಟ್ಟುಕೊಂಡಿದ್ದೇನೆ. ಸಧ್ಯಕ್ಕೆ ಅದರ ರಿಪೇರಿಗೇನೂ ಅವಸರವಿಲ್ಲ.

ನಾನು ಮೊದಲು ಆಫೀಸಿಗೆ ಸೈಕಲ್ಲಿನಲ್ಲಿ ಹೋಗುತ್ತಿದ್ದೆ, ಅದಕ್ಕೂ ಮೊದಲು ನಡೆದುಕೊಂಡು ಹೋಗುತ್ತಿದ್ದೆ. ಬಸ್ಸುಗಳು ಖಾಲಿಯಾಗಿ ಹೋಗುತ್ತಿದ್ದುದನ್ನು ನೋಡಲಾಗದೆ ಈಗ ಬಸ್ಸಿನಲ್ಲಿ ಹೋಗುತ್ತಿದ್ದೇನೆ. ಕಾರಣ ಇದಲ್ಲ. ಸೈಕಲ್ಲನ್ನು ಪೂರ್ತಿ ಬಿಚ್ಚಿಸಿ ರೀ ಫಿಟ್ಟಿಂಗ್‌ಗೆ ಕೊಟ್ಟಿದ್ದೇನೆ, ಟೈರ್, ಟ್ಯೂಬ್, ಪೆಡಲ್ ಸೀಟ್ ಎಂದು ಒಂದೊಂದೇ ಭಾಗವನ್ನು ರಿಪೇರಿ ಮಾಡಿಸಿ ಸಾಕಾಗಿತ್ತು. ಕುಂಬೆ ಬೆಟ್ಟಿನ ಕುಂಞಣ್ಣನ ಅಂಗಡಿಯಲ್ಲಿ ಇನ್ನೂ ಇದೆ ಅದು. ಬಸ್ಸಿನಲ್ಲಿ ಹೋಗುವಾಗಲೂ ನೋಡುತ್ತೇನೆ, ಬರುವಾಗಲೂ ನೋಡುತ್ತೇನೆ. ಸೈಕಲ್ ಇದ್ದ ಹಾಗೆಯೇ ಇದೆ. ಅವನಿಗೂ ಗೊತ್ತಾಗಿರಬೇಕು - ನನಗೆ ಅವಸರವಿಲ್ಲವೆಂದು. ನಿಧಾನವಾಗಿ ರೀ ಫಿಟ್ಟಿಂಗ್ ಮಾಡಿದರಾಯಿತು ಎಂದುಕೊಂಡಿರಬೇಕು ಅಥವಾ ಸೈಕಲ್ ಪೂರಾ ಹಾಳಾಗಿದೆ ಎಂದು ಮೂರು ಕಾಸಿಗೆ ಕೊಳ್ಳುವ ಇರಾದೆಯೂ ಇರಬಹುದು- ಅಂತೂ ನನ್ನ ಸೈಕಲ್ ಈಗ ನನ್ನ ಮನೆಯಲ್ಲಿಲ್ಲದೆ ಇನ್ನೂ ಅನೇಕ ಸೈಕಲ್ಲುಗಳ ಒಟ್ಟಿಗೆ ಆ ಅಂಗಡಿಯಲ್ಲಿದೆ. ಪಾಪ! ಅದಕ್ಕೂ ಸಂಗಾತಿಗಳು ಬೇಕಲ್ಲಾ!

ಕಂತಿನಲ್ಲಿ ಸ್ಕೂಟರ್ ತೆಗೆದುಕೊಂಡು ಕಲಿಯುವಾಗಲೇ ಬಿದ್ದು ಮೂಳೆ ಮುರಿಸಿಕೊಂಡು ಮರಳಿಯತ್ನವ ಮಾಡುವ ಗೋಜಿಗೆ ಹೋಗದೆ ಅದನ್ನು ನನ್ನ ಮಗನ ಕೈಗೆ ಒಪ್ಪಿಸಿದ್ದೆ, ಆತನಾದರೋ ಬಿಸಿ ರಕ್ತದವ. ಸ್ಕೂಟರ್ ಎಂದರೆ ವಿಮಾನವೆಂದು ತಿಳಿದುಕೊಂಡವ, ಹಾಗೆಯೇ ಓಡಿಸುತ್ತಿದ್ದ. ಹೊಯಿಗೆ ಕಲ್ಲು, ಮಣ್ಣು, ಹಾಡಿ, ಗುಡ್ಡ ಎಲ್ಲಡೆಗೂ ಈ ಸ್ಕೂಟರ್ ನುಗ್ಗತೊಡಗಿತು. ಎಲ್ಲದರ ಮೇಲೂ ಓಡಿಸಿದ್ದೇ, ಹಾರಿಸಿದ್ದೇ. ಕೆಲವೊಮ್ಮೆ ಲಾರಿಯ ಕೆಲಸವನ್ನೂ ಮಾಡುತ್ತಿತ್ತು ಅದು. ಪೆಟ್ರೋಲ್ ಎಷ್ಟು ಕುಡಿಯುವುದೆಂದೇ ಅದಕ್ಕೆ ಗೊತ್ತಾಗುತ್ತಿರಲಿಲ್ಲ. ಮೋಟರ್ ಮೆಕ್ಯಾನಿಕ್ ರಾಮು ನಮ್ಮ ಮನೆಗೆ ಬರುತ್ತಿದ್ದ. ಪೂರಾ ಹಾಳಾಗಿ ಹೋಗಿದ್ದ ಸ್ಕೂಟರನ್ನು ಆತ ತೆಗೆದುಕೊಂಡು ಹೋಗಿದ್ದಾನೆ. ಕೆಲವು ಬಿಡಿ ಭಾಗಗಳು ಸಿಗುತ್ತಿಲ್ಲ ಎನ್ನುತ್ತಿದ್ದಾನೆ. ಅಂತೂ ಸ್ಕೂಟರ್ ರಿಪೇರಿಯ ಹಂತದಲ್ಲಿದೆ. ನನಗೇನೂ ಅವಸರವಿಲ್ಲ. ನನ್ನ ಮಗನಾದರೋ ಅದನ್ನು ಮಾರಿ ಹೊಸ ಸ್ಕೂಟರ್ ತೆಗೆದುಕೊಳ್ಳುವ ಸಹ್ನಾಹದಲ್ಲಿದ್ದಾನೆ, ಏನಾದರೂ ಮಾಡಿಕೊಳ್ಳಲಿ, ಹಣ ನನ್ನ ಹತ್ತಿರ ಕೇಳದಿದ್ದರೆ ಸಾಕು. ಹಳೇ ಸ್ಕೂಟರ್ ಮಾರಿದರೆ ಎಷ್ಟು ಹಣ ಬರಬಹುದು ಎಂದು ಕೇಳಿದರೆ ರಾಮು ಹೇಳುತ್ತಾನೆ 'ಕಿಲೋ ಲೆಕ್ಕದಲ್ಲಿ ತೆಗೆದುಕೊಂಡಾರು' ಎಂದು ಅಷ್ಟೂ ಹಾಳಗಿರಲಿಕ್ಕಿಲ್ಲ ಆ ಸ್ಕೂಟರ್ ಕಿಲೋ ಲೆಕ್ಕದಲ್ಲಿ ಮಾರಲಿಕ್ಕಾದರೂ ಏನಷ್ಟು ಅವಸರ!


ಹೀಗೆ ಹೇಳುತ್ತಾ ಹೋಗಿ ಅವಸರದಲ್ಲಿರುವ ನಿಮಗೆ ಅವಸರವಿಲ್ಲವಲ್ಲಾ ಎಂದು ಹೇಳುತ್ತಾ ನಿಮ್ಮ ಸಹನೆಯ ದಾರಿ ತಪ್ಪಿಸಲು ನನಗೇನೂ ಅವಸರವಿಲ್ಲ. ಆದರೂ ಹೇಳುತ್ತೇನೆ - ನಮ್ಮ ಮದುವೆಯ ಫೊಟೋ ಫ್ರೇಮ್ ಹಾಕಿಸಲು ಕೊಟ್ಟು ಮೂರು ವರ್ಷವಾಯಿತು - ಬಾವಿಯ ಮೋಟರ್ ರಿಪೇರಿಗೆ ಕೊಟ್ಟು ಒಂದು ಮಳೆಗಾಲ ಕಳೆದಿದೆ. ಪ್ಯಾಂಟ್ ಶರ್ಟ್ ಹೊಲಿಯಲು ಕೊಟ್ಟು ಒಂದು ವರ್ಷವಾಯಿತು. ಚಪ್ಪಲಿ ರಿಪೇರಿಗೆ ಕೊಟ್ಟು ಎಷ್ಟು ತಿಂಗಳಾಯಿತೂಂತ ಗೊತ್ತಿಲ್ಲ. ಎಲೆಕ್ಟ್ರಿಕ್ ಸ್ಟೌವ್ ವಿರೋಧಿಯಲ್ಲಿದೆ, ನನಗೆ ಟ್ರಾನ್ಸ್‌ಫರ್ ಆದಾಗ ಸಿಕ್ಕಿದ ಸೂಟ್‌ಕೇಸಿನ ಬೀಗ ಸರಿ ಮಾಡಿಸಲು ಕೊಟ್ಟು ಇವತ್ತಿಗೆ ಸರಿಯಾಗಿ ಎರಡು ವರ್ಷವಾಯಿತು. ಒಟ್ಟಿನಲ್ಲಿ ಯಾರಿಗೂ ಅವಸರವಿಲ್ಲ.


ನನಗಂತೂ ಈ 'ಅವಸರವಿಲ್ಲ' ಎಂಬ ಪದ ಪ್ರಯೋಗ ಮಾಡಿ ಪ್ರಸಿದ್ಧಿ ಪಡೆಯುವ ಅವಸರವಂತೂ ಖಂಡಿತಾ ಇಲ್ಲ. ಏನೋ ನನ್ನ ಪ್ರಾರಂಭ ಕರ್ಮ - ನನಗೆ ಯಾವುದಕ್ಕೂ ಅವಸರವಿಲ್ಲವೆಂದೇ ಎಲ್ಲರೂ ಭಾವಿಸಿದಂತಿದೆ, ಇಲ್ಲದಿದ್ದರೆ ನನ್ನ ಪುಸ್ತಕವೊಂದು ಅಚ್ಚಿನ ಮನೆಯಲ್ಲಿ ಮೂರು ವರ್ಷಗಳಿಂದಲೂ ಇರುತ್ತಿರಲಿಲ್ಲ.

ಮೊನ್ನೆ ಒಂದು ರಾತ್ರಿ ಊಟ ಮಾಡಿ ಬೆಳಗಿನ ಪತ್ರಿಕೆಯನ್ನು ರಿವಿಶನ್ ಮಾಡಲು ಹಿಡಿದುಕೊಂಡು ಫ್ಯಾನ್‌ನ ಸ್ವಿಚ್ ಹಾಕಿ ಆರಾಮ ಕುರ್ಚಿಯಲ್ಲಿ ಕುಳಿತೆ. ಕರಕರ - ಕಿರಕಿರ - ಗರಗರ - ಗಡ್ ಗಡ್ ತಲೆಯ ಮೇಲಿಂದ ಬರತೊಡಗಿತು ಶಬ್ದ. ''ನನ್ನನ್ನೂ ಕಳಿಸಿ ರಿಪೇರಿಗೆ'' ಎಂದ ಹಾಗಾಯಿತು. ಕನ್ನಡಿ, ರೇಡಿಯೋ ಇತ್ಯಾದಿ ತನ್ನ ಸಂಗಾತಿಗಳು ರಿಪೇರಿ ಅಂಗಡಿಗಳಲ್ಲಿ ಮಜಾ ಮಾಡುತ್ತಿರುವಾಗ ನಾನೊಬ್ಬನೇ ಕೆಲಸ ಮಾಡುವುದೆಂದರೆ ಬೋರ್ ಎಂದಿತೋ ಏನೋ ಅದು. ಕಡು ಬೇಸಿಗೆ, ನುಸಿಕಾಟ ಬೇರೆ, 'ನೀನೂ ನನ್ನ ಕೈ ಬಿಡುವೆಯಾ, ಆಗಲಿ ನಾಳೆ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿ ಮಲಗಿದೆ.

ಬೆಳಗ್ಗೆ ಯದುಪತಿರಾಯರ ರಿಕ್ಷಾಕ್ಕೆ ಕಾಯುತ್ತಿದ್ದೆ. ಒಳಗಿನಿಂದ ಅವಳು ಕರೆದ ಹಾಗಾಯಿತು. ಅಟ್ಟದ ಮೇಲಿದ್ದ ಒಂದು ಹಾರ್ಮೋನಿಯಂ, ಒಂದು ಕೊಳಲು, ಮೂರು ಒಟ್ಟೆ ಕೊಡಪಾನ, ಒಂದು ಟ್ರೈಸಿಕಲ್, ಎರಡು ಹಿಡಿ ಇಲ್ಲದ ಕತ್ತಿಗಳು, ಒಂದು ಹರಿದ ಸೊಳ್ಳೆ ಪರದೆ, ಇನ್ನೂ ಏನೇನೋ ಅಟ್ಟದಿಂದಿಳಿದು ಗೋಡೆಯ ಬಳಿ ಸಾಲಾಗಿ ಮಲಗಿದ್ದವು 'ಏನೂ ಅವಸರವಿಲ್ಲ. ಇವನ್ನೂ ರಿಪೇರಿ ಅಂಗಡಿಗೆ ತೆಗೆದುಕೊಂಡು ಹಾಕಿ. ಎಂದಾದರೂ ಒಂದು ದಿನ ರಿಪೇರಿಯಾಗಿ ಬಂದರೆ ಸಾಕು' ಎಂದಳು ಆಕೆ ನಗುತ್ತಾ. ಅವಸರವಿಲ್ಲದೆ ನಾನೂ ನಿಧಾನವಾಗಿ ನಕ್ಕೆ.

ಖಾಲಿ ಖಾಲಿಯಾಗಿರುವ ನನ್ನ ಮನೆಯನ್ನು ತುಂಬಲು ಈ ರಿಪೇರಿ ಅಂಗಡಿಗಳ ಮುಂದೆ ಧರಣಿ ನಡೆಸಬೇಕೆಂದಿದ್ದೇನೆ. ಆದರೂ ಅವಸರವಿಲ್ಲವೆನ್ನಿ!


NORTH - WEST
INDIA'S MOST RADICAL RANGE OF ELECTRICAL DEVICES.
MINIATURE CIRCUIT BREAKERS WITH TECHNICAL KNOW-HOW FROM VYNCKIER, BELGIUM
SINGLE PHASE MOTOR STARTERS
PALM SWITCHES
MODULAR SWITCHES, SOCKETS, PLATES AND REGULATORS
NORTH - WEST
AUTHORISED DEALERS:
SESHADRI & COMPANY
ELECTRICAL CONSULTANTS & CONSTRUCTION ENGINEERS
15/2. XI MAIN ROAD. MALLESHWARAM, BANGALORE-560 003.
PHONE: 341764, 341997, 348547



Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 003. Printed at IMPRESSIONS. 404. Sampige Road, Malleswaram, Bangalore-560 003. Editor : M. SHIVAKUMAR.